ಅಧ್ಯಾಯ –I

ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆಯ ಚೌಕಟ್ಟು ಮತ್ತು ಹಣಕಾಸಿನ ವರದಿ

ಅಧ್ಯಾಯ –I

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆಯ ಚೌಕಟ್ಟು ಮತ್ತು ಹಣಕಾಸಿನ ವರದಿ

ಎ. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯವೈಖರಿ

1.1 ಪರಿಚಯ

73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಪರಿಣಾಮವಾಗಿ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿಗಳು, ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಗಳು ಎಂಬ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, 1993ರ ಕಾಯ್ದೆಯನ್ನು (ಇನ್ನು ಮುಂದೆ ಕೆಪಿಆರ್ ಕಾಯ್ದೆ, 1993 ಎಂದು ಕರೆಯಲಾಗುತ್ತದೆ) ಜಾರಿಗೆ ತಂದಿತು. ಕೆಪಿಆರ್ ತಿದ್ದುಪಡಿ ಕಾಯ್ದೆ 2011ರ ಪರಿಚ್ಛೇಧ 246ರ ಅಡಿಯಲ್ಲಿ ಉಪ ಪರಿಚ್ಛೇಧ(i)ವನ್ನು ಸೇರಿಸಿದ್ದು, ಅದರನ್ವಯ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು ಕಾಯ್ದೆ, 1971 (ಸಿಎಜಿ ಡಿಪಿಸಿ ಕಾಯ್ದೆ 1971)ರ ನಿಬಂಧನೆಗಳಿಗೆ ಅನುಗುಣವಾಗಿ 'ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಲೆಕ್ಕಪತ್ರಗಳ ಪರಿಶೋಧನೆಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆವನ್ನು(ಟಿಜಿಎಸ್) ನೀಡುವುದರ ಜೊತೆಗೆ ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳ ಪರೀಕ್ಷಾ ಪರಿಶೋಧನೆಯನ್ನು ಸಹ ಕೈಗೊಳ್ಳಬೇಕು'. ಈ ಕಾಯ್ದೆಯನ್ನು 2013 ಮತ್ತು 2015ರಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲಾಯಿತು ಮತ್ತು 2017ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ಎಂದು ಮರುನಾಮಕರಣ ಮಾಡಲಾಯಿತು.

1.1.1 ರಾಜ್ಯದ ಚಿತ್ರಣ

ರಾಜ್ಯದ ಜನಸಂಖ್ಯಾ ಮತ್ತು ಅಭಿವೃದ್ಧಿಯ ತುಲನಾತ್ಮಕ ಚಿತ್ರವನ್ನು **ಕೋಷ್ಟಕ–1.1**ರಲ್ಲಿ ನೀಡಲಾಗಿದೆ. ಕಳೆದ ದಶಕದಲ್ಲಿ ಕರ್ನಾಟಕದ ಜನಸಂಖ್ಯಾ ಬೆಳವಣಿಗೆ ಶೇಕಡಾ15.60 ರಷ್ಟಿದ್ದು, ಇದು ರಾಷ್ಟ್ರೀಯ ಸರಾಸರಿ ಶೇಕಡಾ17.70 ಕ್ಕಿಂತ ಕಡಿಮೆಯಾಗಿತ್ತು.

ನಗರ ಮತ್ತು ಗ್ರಾಮೀಣ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆಯು ಅನುಕ್ರಮವಾಗಿ ಶೇಕಡಾ31.50 ಮತ್ತು ಶೇಕಡಾ7.40 ರಷ್ಟಿತ್ತು. 2011ರ ಜನಗಣತಿಯ ಪ್ರಕಾರ, ರಾಜ್ಯದ ಜನಸಂಖ್ಯೆಯು 6.11 ಕೋಟಿಯಷ್ಟಿದ್ದು, ಅದರಲ್ಲಿ ಶೇಕಡಾ49.31 ರಷ್ಟು ಮಹಿಳೆಯರಾಗಿದ್ದರು. ರಾಜ್ಯದಲ್ಲಿ 114 ಹಿಂದುಳಿದ ತಾಲ್ಲೂಕುಗಳಿದ್ದು, ಅವುಗಳಲ್ಲಿ 39 ತಾಲ್ಲೂಕುಗಳು ಅತ್ಯಂತ ಹಿಂದುಳಿದಿದ್ದವು.

ಕೋಷ್ಟಕ–1.1: ರಾಜ್ಯದ ಪ್ರಮುಖ ಅಂಕಿಅಂಶಗಳು

ಸೂಚಕ	ಘಟಕ	ರಾಜ್ಯ	ರಾಷ್ಟ್ರೀಯ
ಜನಸಂಖ್ಯೆ	1,000s	61,095	12,10,570
ಜನಸಂಖ್ಯಾ ಸಾಂದ್ರತೆ	ಚದರ ಕಿ.ಮೀ.ಗೆ ವ್ಯಕ್ತಿಗಳು	319	382
ನಗರ ಜನಸಂಖ್ಯೆ	1,000	23,997	3,77,106
ಗ್ರಾಮೀಣ ಜನಸಂಖ್ಯೆ	1,000	37,097	8,33,463
ನಗರ ಜನಸಂಖ್ಯೆ	ಶೇಕಡಾವಾರು	39.28	31.20
ಗ್ರಾಮೀಣ ಜನಸಂಖ್ಯೆ	ಶೇಕಡಾವಾರು	60.72	68.85
ಜಿಲ್ಲಾ ಪಂಚಾಯಿತಿಗಳು	ಸಂಖ್ಯೆಗಳು	31*	584 (ಅಂದಾಜು)
ತಾಲ್ಲೂಕು ಪಂಚಾಯಿತಿಗಳು	ಸಂಖ್ಯೆಗಳು	233	6,312 (ಅಂದಾಜು)
ಗ್ರಾಮ ಪಂಚಾಯಿತಿಗಳು	ಸಂಖ್ಯೆಗಳು	5,962	2,38,054 (ಅಂದಾಜು)
ಲಿಂಗಾನುಪಾತ (1,000 ಪುರುಷರಿಗೆ ಮಹಿಳೆಯರು)	ಸಂಖ್ಯೆಗಳು	973	943
ಸಾಕ್ಷರತೆಯ ಪ್ರಮಾಣ	ಶೇಕಡಾವಾರು	75.40	73.00
***31ನೇ ಜಿಲ್ಲಾ ಪಂಚಾಯಿತಿ:– ವಿಜಯನಗರ ಜಿಲ್ಲೆ**			

ಆಧಾರ; ಆರ್ಥಿಕ ಸಮೀಕ್ಷೆ ವರದಿ 2021–22, ಜನಗಣತಿ 2011, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಾರ್ಷಿಕ ವರದಿ 2021–22 ಮತ್ತು ಕರ್ನಾಟಕ ಒಂದು ಪಕ್ಷಿ ನೋಟ 2021.

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ (1,91,791 ಚದರ ಕಿ.ಮೀ) ಭಾರತದ ಏಳನೇ ಅತಿದೊಡ್ಡ ರಾಜ್ಯವಾಗಿದ್ದು, ಭಾರತದ ಜನಸಂಖ್ಯೆಯ ಶೇಕಡಾ 5.05 ರಷ್ಟಿದೆ. ರಾಜ್ಯದ ಗ್ರಾಮೀಣ ಸಾಕ್ಷರತೆ (ಶೇಕಡಾ 68.7) ರಾಷ್ಟ್ರೀಯ ಸಾಕ್ಷರತಾ ಪ್ರಮಾಣಕ್ಕಿಂತ (ಶೇಕಡಾ 67.8) ಉತ್ತಮವಾಗಿದೆ. ನಗರ ಸಾಕ್ಷರತೆಯು (ಶೇಕಡಾ 85.8) ರಾಷ್ಟ್ರೀಯ ಸಾಕ್ಷರತಾ ಪ್ರಮಾಣಕ್ಕಿಂತ (ಶೇಕಡಾ 84.10) ಉತ್ತಮವಾಗಿದೆ.

1.2 ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ

ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರಾಜ್ಯ ಮಟ್ಟದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಪರ್ಕಸೇತುವಾಗಿದೆ. ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಾಂಸ್ಥಿಕ ರಚನೆಯನ್ನು **ಅನುಬಂಧ–1.1** ರಲ್ಲಿ ನೀಡಲಾಗಿದೆ.

1.3 ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಿಎಜಿಯವರ ಅಧ್ಯಾದೇಶ ಮತ್ತು ಲೆಕ್ಕಪರಿಶೋಧನೆಯ ವ್ಯಾಪ್ತಿ

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಒಂದು ರೀತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಮತ್ತೊಂದು ರೀತಿಯಲ್ಲಿ ಸಿಎಜಿಯವರ ಪಾತ್ರವು ವಿಭಿನ್ನವಾಗಿರುತ್ತದೆ.

- ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 262ರ ಪ್ರಕಾರ, ಜಿಲ್ಲಾ ಪಂಚಾಯಿತಿ ನಿಧಿಯ ಲೆಕ್ಕಪತ್ರಗಳನ್ನು ಸಿಎಜಿ (ಡಿಪಿಸಿ) ಕಾಯ್ದೆ 1971ರ ಅನುಸಾರವಾಗಿ ಸಿಎಜಿರವರಿಂದ ಲೆಕ್ಕಪರಿಶೋಧನೆ ಮಾಡಲ್ಪಡುತ್ತದೆ. ಅಂತೆಯೇ, ಕೆಪಿಆರ್ ಕಾಯ್ದೆಯ 253ನೇ ಪರಿಚ್ಛೇಧವು, ತಾಲ್ಲೂಕು ಪಂಚಾಯಿತಿ ನಿಧಿಯ ಲೆಕ್ಕಪತ್ರಗಳನ್ನು ಸಿಎಜಿ (ಡಿಪಿಸಿ) ಕಾಯ್ದೆ 1971ರನುಸಾರ ಲೆಕ್ಕಪರಿಶೋಧಿಸಲು ಆದೇಶಿಸುತ್ತದೆ. ಈ ಲೆಕ್ಕಪರಿಶೋಧನೆಯನ್ನು ಡಿಪಿಸಿ ಕಾಯ್ದೆ ಪರಿಚ್ಛೇಧ 19(3)ರ ಅಡಿಯಲ್ಲಿ

ಮಾಡಲಾಗುತ್ತದೆ ಮತ್ತು ಪ್ರತಿ ಐದು ವರ್ಷಗಳಿಗೊಮ್ಮೆ ಈ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತದೆ. ಪ್ರಸ್ತುತ ವಿಸ್ತರಣೆಯು ಮಾರ್ಚ್ 2027 ರವರೆಗೆ ಇರುತ್ತದೆ. ಅದರಂತೆ, ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮತ್ತು ತಾಲ್ಲೂಕು ಪಂಚಾಯಿತಿಗಳ ಲೆಕ್ಕಪತ್ರಗಳ ಪ್ರಮಾಣೀಕರಣವನ್ನು ಕೈಗೊಳ್ಳಲಾಗಿದ್ದು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು (ಎಸ್ಎಆರ್) ಪ್ರತಿ ಜಿಲ್ಲಾ ಪಂಚಾಯಿತಿಗೆ ಮತ್ತು ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಗೂ ಸೇರಿ ಒಂದು ಏಕೀಕೃತ ಎಸ್ಎಆರ್ ನೀಡಲಾಗುತ್ತಿದೆ. ಅನುಪಾಲನಾ ಮತ್ತು ಕ್ರಮಬದ್ಧತೆಯ ಬಗೆಗಿನ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಸಿಎಜಿಯವರ ಸಾಮಾನ್ಯ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಗುತ್ತದೆ.

- ಗ್ರಾಮ ಪಂಚಾಯಿತಿಗಳ ಪ್ರಾಥಮಿಕ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು (ಕೆಎಸ್ಎಎಡಿ) ನಡೆಸುತ್ತದೆ. ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 246ರ ಪ್ರಕಾರ, ಪ್ರತಿ ಗ್ರಾಮ ಪಂಚಾಯಿತಿಯ ಲೆಕ್ಕಪತ್ರಗಳನ್ನು ಪ್ರತಿ ವರ್ಷ ಕೆಎಸ್ಎಎಡಿಯ ಮಹಾನಿರ್ದೇಶಕರು ಅಧಿಕೃತಗೊಳಿಸಬಹುದಾದ ಅಧಿಕಾರಿಯಿಂದ ಲೆಕ್ಕಪರಿಶೋಧಿಸಲಾಗುತ್ತದೆ. ಇದಲ್ಲದೆ, ಡಿ.ಪಿ.ಸಿ ಕಾಯ್ದೆಯ ಪರಿಚ್ಛೇಧ 20 (1)ರ ಅಡಿಯಲ್ಲಿ ಟಿಜಿಎಸ್ ಆದೇಶವನ್ನು ಸಿಎಜಿಯವರಿಗೆ ವಹಿಸಲಾಗಿದ್ದು, ಅದರ ಅಡಿಯಲ್ಲಿ ಅವರು ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಪರೀಕ್ಷೆಯನ್ನು ಮಾಡಬೇಕಾಗಿರುತ್ತದೆ.

1.4 ನಿಧಿಗಳು, ಕಾರ್ಯಗಳು ಮತ್ತು ಕಾರ್ಯನಿರ್ವಾಹಕರ ಅಧಿಕಾರ ಹಂಚಿಕೆ

73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯಲ್ಲಿ ಕಲ್ಪಿಸಲಾಗಿರುವಂತೆ ಕೆಪಿಆರ್ ಕಾಯ್ದೆಯು ಸಾಂಸ್ಥಿಕ ಕಾರ್ಯವಿಧಾನ ಮತ್ತು ವಿವರವಾದ ಆಡಳಿತ ಚೌಕಟ್ಟಿನ ಜೊತೆಗೆ ನಿಧಿಗಳು, ಕಾರ್ಯಗಳು ಮತ್ತು ಕಾರ್ಯನಿರ್ವಾಹಕರ ಅಧಿಕಾರ ಹಂಚಿಕೆಗೆ ಅವಕಾಶ ನೀಡುತ್ತದೆ.

1.4.1 ನಿಧಿಗಳ ಅಧಿಕಾರ ಹಂಚಿಕೆ

ಪಂಚಾಯತ್ ರಾಜ್ ಸಂಸ್ಥೆಗಳ ಆದಾಯ ಸಂಪನ್ಮೂಲಗಳಲ್ಲಿ ಕೇಂದ್ರ ಹಣಕಾಸು ನಿಗಮ /ರಾಜ್ಯ ಹಣಕಾಸು ನಿಗಮಗಳು ಅನುದಾನಗಳು, ನಿಯೋಜಿಸಲಾದ ಆದಾಯ ಮತ್ತು ಸ್ವಂತ ಆದಾಯದ ಮೂಲಗಳು ಸೇರಿವೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ, ವಿಶೇಷವಾಗಿ ಗ್ರಾಮ ಪಂಚಾಯಿತಿಗಳಿಗೆ ನಿಧಿಯ ಹಂಚಿಕೆಯ ಕೊರತೆಯು ಅವರ ಸ್ವಂತ ಆದಾಯದ ಮೂಲಗಳು, ಒಟ್ಟಾರೆ ಹಣಕಾಸಿನ ಅಗತ್ಯದ ಶೇಕಡಾ ಎರಡಕ್ಕಿಂತ ಕಡಿಮೆಯಿರುವುದರಿಂದ ಅವರನ್ನು ಆರ್ಥಿಕವಾಗಿ ಸುಸ್ಥಿರವಾಗಿಲ್ಲದಂತೆ ಮಾಡಿದೆ. ಹೀಗಾಗಿ ಅವರು ತಮ್ಮ ಸುಸ್ಥಿರತೆಗಾಗಿ ಸರ್ಕಾರದ ಅನುದಾನದ ಮೇಲೆ ಹೆಚ್ಚು ಅವಲಂಬಿತರಾಗಿದ್ದರು.

ಕೇಂದ್ರ ಹಣಕಾಸು ಆಯೋಗ (ಸಿ.ಎಫ್.ಸಿ)/ರಾಜ್ಯ ಹಣಕಾಸು ಆಯೋಗಗಳ (ಎಸ್.ಎಫ್.ಸಿ) ಶಿಫಾರಸುಗಳ ಒಪ್ಪಿಗೆ ಮತ್ತು ಅನುಷ್ಠಾನದಲ್ಲಿ ವಿಳಂಬವಾಗಿತ್ತು. 2ನೇ ಎಸ್.ಎಫ್.ಸಿ. ರಚನೆಯಲ್ಲಿ 474 ದಿನಗಳು, 3ನೇ ಎಸ್.ಎಫ್.ಸಿ. ರಚನೆಯಲ್ಲಿ 327 ದಿನಗಳು ಮತ್ತು 4ನೇ ಎಸ್.ಎಫ್.ಸಿ.ರಚನೆಯಲ್ಲಿ 1,600 ದಿನಗಳ ವಿಳಂಬವಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಸರ್ಕಾರವು ಆಯಾ ಎಸ್.ಎಫ್.ಸಿ.ಗಳ ಶಿಫಾರಸುಗಳನ್ನು 190 ದಿನಗಳಿಂದ 1,284 ದಿನಗಳ ವಿಳಂಬದೊಂದಿಗೆ ಅಂಗೀಕರಿಸಿತು. ಎರಡು ಎಸ್.ಎಫ್ ಸಿ.ಗಳ ನಡುವಿನ ಮಧ್ಯದ ಅವಧಿಯು ಅಂದರೆ 2002–03 ರಿಂದ 2005–06 ಮತ್ತು 2017–18ರಲ್ಲಿ ಆಯಾ ಹಿಂದಿನ ಎಸ್.ಎಫ್.ಸಿ.ಗಳ ಶಿಫಾರಸುಗಳ ಅಡಿಯಲ್ಲಿ ಒಳಗೊಂಡಿದ್ದವು. ರಾಜ್ಯವು 6ನೇ ಎಸ್.ಎಫ್.ಸಿಯ ಬದಲಿಗೆ ಇನ್ನೂ 4ನೇ ಎಸ್.ಎಫ್.ಸಿಯ ಆಡಳಿತದ ಅಡಿಯಲ್ಲಿದೆ (4 ರಾಜ್ಯಗಳು[1] 6ನೇ ಎಸ್.ಎಫ್.ಸಿ. ಆಡಳಿತದ ಅಡಿಯಲ್ಲಿವೆ). ಹಣಕಾಸು ಮತ್ತು ಲೆಕ್ಕಪತ್ರದ ಅಂಶವನ್ನು ಕ್ರೋಢೀಕರಿಸುವ

[1] ಅಸ್ಸಾಮ್, ಬಿಹಾರ್, ಪಂಜಾಬ್ ಮತ್ತು ರಾಜಸ್ಥಾನ್.

ಸಾಂಸ್ಥಿಕ ಕ್ರಮಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿಲ್ಲ. ಎಸ್.ಎಫ್.ಸಿಗಳ ಅನುಷ್ಠಾನದಲ್ಲಿನ ವಿಳಂಬವು ಮಧ್ಯದ ಅವಧಿಯಲ್ಲಿ ಹೆಚ್ಚಳದ ಅನುದಾನಗಳು/ಆದಾಯಗಳನ್ನು ವಿತರಿಸದ ಕಾರಣ ಪಂಚಾಯತ್ ರಾಜ್ ಸಂಸ್ಥೆಗಳ ಆರ್ಥಿಕ ಸಂಪನ್ಮೂಲದ ಮೇಲೆ ಪರಿಣಾಮ ಬೀರಿತು. ಇದಲ್ಲದೆ, ಎಸ್.ಎಫ್.ಸಿಗಳ ಶಿಫಾರಸುಗಳ ಮೇಲೆ ಕ್ರಮ ಕೈಗೊಂಡ ಅಂದರೆ ಮಾರ್ಪಾಡು ಅಥವಾ ಸ್ವೀಕಾರ ಮತ್ತು ಅನುಷ್ಠಾನವನ್ನು ಸೂಚಿಸುವ ವರದಿಯನ್ನು ಆರು ತಿಂಗಳೊಳಗೆ ಶಾಸಕಾಂಗದಲ್ಲಿ ಮಂಡಿಸಬೇಕಾಗಿದ್ದು, ಮಂಡನೆಯಾಗಿರಲಿಲ್ಲ.

ಕೈಗಾರಿಕಾ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಗಳ ಆಸ್ತಿ ತೆರಿಗೆ ವಿಧಿಸುವ ಮತ್ತು ಸಂಗ್ರಹಿಸುವ ಹಕ್ಕನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ/ಇಲೆಕ್ಟ್ರಾನಿಕ್ಸ್ ಸಿಟಿ ಕೈಗಾರಿಕಾ ಪಟ್ಟಣ ಪಂಚಾಯಿತಿ ಪ್ರಾಧಿಕಾರಕ್ಕೆ ವರ್ಗಾಯಿಸಿದ್ದರಿಂದ, ಆಸ್ತಿ ತೆರಿಗೆ ಮತ್ತು ಇತರ ತೆರಿಗೆಗಳನ್ನು ವಿಧಿಸುವ ಮತ್ತು ಸಂಗ್ರಹಿಸುವಲ್ಲಿನ ನಿರ್ಬಂಧಗಳನ್ನು ಸರ್ಕಾರವು ಪರಿಹರಿಸಲಿಲ್ಲ. ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು ಈ ಸಂಸ್ಥೆಗಳು ಸಂಗ್ರಹಿಸಿದ ₹ 30.03 ಕೋಟಿ ಆಸ್ತಿ ತೆರಿಗೆ/ಕಟ್ಟಡ ಪರವಾನಗಿ ಶುಲ್ಕವನ್ನು ಇನ್ನೂ ಪಡೆದಿರಲಿಲ್ಲ.

ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ಬರುವ ಸಂಭಾವ್ಯ ಆದಾಯ ಮಾರ್ಗಗಳಾದ ಸುಧಾರಣೆ ತೆರಿಗೆ, ವೃತ್ತಿಪರ ತೆರಿಗೆ, ಮಾರುಕಟ್ಟೆ ಶುಲ್ಕ ಇತ್ಯಾದಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಿಲ್ಲ ಮತ್ತು ಗ್ರಾಮ ಪಂಚಾಯಿತಿಗಳಿಂದ ಅಗತ್ಯವಾದ ಯಾವುದೇ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ)ಗಳನ್ನು ಒತ್ತಾಯಿಸಲಾಗಿರಲಿಲ್ಲ.

1.4.2 ಕಾರ್ಯಗಳ ಹಂಚಿಕೆ

ಕೆಪಿಆರ್ ಕಾಯ್ದೆ, 1993ರ 58ನೇ ಪರಿಚ್ಛೇದವು, ಈ ಕಾಯ್ದೆಯ ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿದಂತೆ 31 ಕಾರ್ಯಗಳನ್ನು ನಿರ್ವಹಿಸಲು ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡುತ್ತದೆ. ಅಂತೆಯೇ, ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 145 ಮತ್ತು ಪರಿಚ್ಛೇದ 184, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಕಾಯ್ದೆಯ ಅನುಸೂಚಿ–II ಮತ್ತು ಅನುಸೂಚಿ–IIIರಲ್ಲಿ ನಿರ್ದಿಷ್ಟಪಡಿಸಿದಂತೆ ಅನುಕ್ರಮವಾಗಿ 30 ಕಾರ್ಯಗಳನ್ನು ಮತ್ತು 28 ಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡುತ್ತದೆ. ರಾಜ್ಯ ಸರ್ಕಾರವು 11ನೇ ಅನುಸೂಚಿಯಲ್ಲಿ ತಿಳಿಸಿರುವ ಎಲ್ಲಾ 29 ಕಾರ್ಯಗಳನ್ನು (**ಅನುಬಂಧ–1.2)** ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಿದ್ದರೂ, ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ನಡುವೆ ಎಲ್ಲಾ ಕಾರ್ಯಗಳನ್ನು ವಿತರಿಸುವ ಚಟುವಟಿಕೆಯ ನಕ್ಷೆಯನ್ನು ನವೆಂಬರ್ 2016ರಲ್ಲಿ ಮಾತ್ರ ರೂಪಿಸಿತು. ಚಟುವಟಿಕೆಯ ನಕ್ಷೆಯನ್ನು **ಅನುಬಂಧ–1.3**ರಲ್ಲಿ ನೀಡಲಾಗಿದೆ.

1.4.3 ಕಾರ್ಯನಿರ್ವಾಹಕರ ಅಧಿಕಾರ ಹಂಚಿಕೆ

ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳನ್ನು ಹೊರತುಪಡಿಸಿ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾರ್ಯನಿರ್ವಾಹಕರ ಅವಶ್ಯಕತೆ ನಿರ್ಣಯಿಸಲು, ನೇಮಕಾತಿ ಮಾಡಲು, ಪದವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸಿ & ಆರ್ ನಿಯಮಗಳು) ವ್ಯಾಖ್ಯಾನಿಸಲು, ವೇತನ ಮತ್ತು ಭತ್ಯೆಗಳನ್ನು ನಿಯಂತ್ರಿಸಲು, ಶಿಸ್ತು ಕ್ರಮ ಕೈಗೊಳ್ಳಲು ಮತ್ತು ಕಾರ್ಯನಿರ್ವಾಹಕರನ್ನು ವರ್ಗಾಯಿಸಲು ಅಧಿಕಾರವನ್ನು ನೀಡಿರಲಿಲ್ಲ.

ವಿವಿಧ ಸಂಬಂಧಿತ ಇಲಾಖೆಗಳ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಾಹಕರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ತರಲಾಗಿದ್ದರೂ, ನೇಮಕಾತಿ, ವರ್ಗಾವಣೆ ಮತ್ತು ಶಿಸ್ತಿನ ಪ್ರಕ್ರಿಯೆಗಳಂತಹ ಅಧಿಕಾರಿಗಳ ಮೇಲಿನ ನಿಯಂತ್ರಣವು ಇನ್ನೂ ರಾಜ್ಯ ಸರ್ಕಾರದ ನಿಯಂತ್ರಣದಲಿತ್ತು. ಹೀಗಾಗಿ, ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಾಹಕರ ಮೇಲೆ ದ್ವಂದ್ವ ನಿಯಂತ್ರಣಗಳಿವೆ.

ವಿವಿಧ ಸರ್ಕಾರಿ ಯೋಜನೆಗಳ ಉತ್ತಮ ಅನುಷ್ಠಾನಕ್ಕಾಗಿ ತಾಲ್ಲೂಕು/ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಮಾರ್ಗದರ್ಶನ ನೀಡುವ ಮತ್ತು ಕೆಲಸ ಮಾಡುವ ವಿಸ್ತರಣಾ ಅಧಿಕಾರಿಗಳು/ಕ್ಷೇತ್ರ ವಿಸ್ತರಣಾ ಅಧಿಕಾರಿಗಳ ಪದವೃಂದವನ್ನು ಸಿ & ಆರ್ ನಿಯಮಗಳಲ್ಲಿ ಸೇರಿಸುವ ಅಗತ್ಯವನ್ನು ಮೂರನೇ ಎಸ್‌ಎಫ್‌ಸಿಯು ಎತ್ತಿ ತೋರಿಸಿತು.

ಆದಾಗ್ಯೂ, ಜುಲೈ 2021 ರಲ್ಲಿ ಅಧಿಸೂಚನೆಗೊಂಡ ಕರ್ನಾಟಕ ಸಾಮಾನ್ಯ ಸೇವೆಗಳ (ಪಂಚಾಯತ್ ರಾಜ್ ಇಲಾಖೆ ಪದವೃಂದ ಮತ್ತು ನೇಮಕಾತಿ) ನಿಯಮಗಳು 2020 ರಲ್ಲಿ ವಿಸ್ತರಣಾ ಅಧಿಕಾರಿಗಳು ಮತ್ತು ಕ್ಷೇತ್ರ ವಿಸ್ತರಣಾ ಅಧಿಕಾರಿಗಳ ಹುದ್ದೆಗಳನ್ನು ಸೇರಿಸಲಾಗಿರಲಿಲ್ಲ, ಇದು ಎಸ್.ಎಫ್.ಸಿ ಶಿಫಾರಸಿಗೆ ಅನುಗುಣವಾಗಿರಲಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಶಾಶ್ವತ ಪದವೃಂದವನ್ನು ಸರ್ಕಾರವು ರಚಿಸಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಹೇಳಿಕೆಯನ್ನು (ಮೇ 2023) ಒಪ್ಪಿಕೊಂಡಿತು.

ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಚೌಕಟ್ಟಿನ ಪ್ರಕಾರ, ರಾಜ್ಯಗಳು ಮಾರ್ಗಸೂಚಿಗಳಿಗೆ ಅನುಗುಣವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗಾಗಿ ವಿವರವಾದ ವಾರ್ಷಿಕ ರಾಜ್ಯ ಸಾಮರ್ಥ್ಯ ನಿರ್ಮಾಣ ಯೋಜನೆಗಳನ್ನು ಸಿದ್ಧಪಡಿಸಬೇಕು ಮತ್ತು ಅನುಮೋದನೆಗಾಗಿ ಪಂಚಾಯತ್ ರಾಜ್ ಸಚಿವಾಲಯಕ್ಕೆ ಸಲ್ಲಿಸಬೇಕು. ಅಂತಹ ವಾರ್ಷಿಕ ಯೋಜನೆಗಳನ್ನು ಚುನಾಯಿತ ಪ್ರತಿನಿಧಿಗಳು, ಪಂಚಾಯತ್ ಕಾರ್ಯನಿರ್ವಾಹಕರು ಮತ್ತು ಸಂಬಂಧಪಟ್ಟ ಇತರ ಪಾಲುದಾರರೊಂದಿಗೆ ವ್ಯಾಪಕ ಸಮಾಲೋಚನೆಯನ್ನು ಮತ್ತು ಅಗತ್ಯ ಮೌಲ್ಯಮಾಪನ ಒಳಗೊಂಡ ಪ್ರಕ್ರಿಯೆಯ ನಂತರ ರಾಜ್ಯವು ಅಭಿವೃದ್ಧಿಪಡಿಸಬೇಕಾಗಿತ್ತು. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆಯು ವಾರ್ಷಿಕವಾಗಿ ತರಬೇತಿ ಅಗತ್ಯಗಳ ಮೌಲ್ಯಮಾಪನ (ಟಿ.ನ್.ಎ) ನಡೆಸಲಿಲ್ಲ ಮತ್ತು 2020–21 ರವರೆಗೆ ತರಬೇತಿಗಳನ್ನು ನಡೆಸಲು 2015–16ರ ಟಿ.ಎನ್.ಎ ಅನ್ನು ಅವಲಂಬಿಸಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು.

ರಾಜ್ಯ ಸರ್ಕಾರವು (ಮೇ 2023) ಟಿ.ಎನ್.ಎಯನ್ನು ವಾರ್ಷಿಕವಾಗಿ ನಡೆಸುವುದಿಲ್ಲ ಎಂದು ಒಪ್ಪಿಕೊಂಡಿತು. ವಾರ್ಷಿಕ ಆಧಾರದ ಮೇಲೆ ಟಿಎನ್‌ಎ ನಡೆಸದಿರುವುದು ಮತ್ತು ಮುನ್ನೋಟದ ಯೋಜನೆಯನ್ನು ಸಿದ್ಧಪಡಿಸದಿರುವುದು ಸಾಮರ್ಥ್ಯ ವರ್ಧನೆ ಉದ್ದೇಶವನ್ನು ಸೋಲಿಸಿತು.

1.5 ಸಮಿತಿಗಳ ರಚನೆ

1.5.1 ಸ್ಥಾಯಿ ಸಮಿತಿಗಳು

ಕೆಪಿಆರ್ ಕಾಯ್ದೆ, 1993ರ ಪರಿಚ್ಛೇದ 61, 148 ಮತ್ತು 186ರ ಪ್ರಕಾರ, ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಚುನಾವಣೆಯ ಮೂಲಕ ತಮ್ಮ ಸದಸ್ಯರುಗಳಿಂದ ಸ್ಥಾಯಿ ಸಮಿತಿಗಳನ್ನು ರಚಿಸತಕ್ಕದ್ದು ಮತ್ತು ಅವುಗಳ ಅಧ್ಯಕ್ಷತೆಯನ್ನು ಆಯಾ ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರು ವಹಿಸತಕ್ಕದ್ದು. ಸ್ಥಾಯಿ ಸಮಿತಿಗಳು ಆಯಾ ಪಂಚಾಯತ್ ರಾಜ್ ಸಂಸ್ಥೆಗಳು ತಮಗೆ ವಹಿಸಿಕೊಟ್ಟ ಕಾರ್ಯಗಳನ್ನು ನಿರ್ವಹಿಸಬೇಕು. ಸ್ಥಾಯಿ ಸಮಿತಿಗಳ ಪಾತ್ರಗಳ ವಿವರಗಳನ್ನು **ಅನುಬಂಧ 1.4**(ಎ)ರಲ್ಲಿ ವಿವರಿಸಲಾಗಿದೆ.

ಅನುಬಂಧ–1.4(ಬಿ)ರಲ್ಲಿ ತೋರಿಸಿದಂತೆ 23 ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಯಿ ಸಮಿತಿಗಳನ್ನು ರಚಿಸಲಾಗಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿತು.

ಸ್ಥಾಯಿ ಸಮಿತಿಗಳನ್ನು ರಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ (ಏಪ್ರಿಲ್ 2024) ತಿಳಿಸಿತು. ಆದರೆ ಸ್ಥಾಯಿ ಸಮಿತಿಗಳ ರಚನೆಗೆ ಸಂಬಂಧಿಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಗಾಗಿ ಒದಗಿಸಲಿಲ್ಲ.

1.5.2 ಜಿಲ್ಲಾ ಯೋಜನಾ ಸಮಿತಿ

ಸಂವಿಧಾನದ ಅನುಚ್ಛೇದ 243(ಝಡ್ ಡಿ) ರನ್ವಯ ಜಿಲ್ಲಾ ಯೋಜನಾ ಸಮಿತಿಗಳು 'ಜಿಲ್ಲೆಯಲ್ಲಿನ ಪಂಚಾಯಿತಿಗಳು ಮತ್ತು ಪುರಸಭೆಗಳು ಸಿದ್ಧಪಡಿಸಿದ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಇಡೀ ಜಿಲ್ಲೆಗೆ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು (ಡಿಡಿಪಿ) ಸಿದ್ಧಪಡಿಸುವುದು' ಅಗತ್ಯವಾಗಿದೆ.

ರಾಜ್ಯ ಯೋಜನೆಯಲ್ಲಿ ಏಕೀಕರಣಕ್ಕಾಗಿ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿ (ಡಿಪಿಡಿಸಿ[2]) ಮೂಲಕ ಡಿಡಿಪಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕಾಗಿತ್ತು. ಇದಲ್ಲದೆ, ಜಿಲ್ಲಾ ಯೋಜನೆ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಬೇಕಾಗಿತ್ತು. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ವಾರ್ಷಿಕ ವಂತಿಗೆಗಳ ಮೂಲಕ ಡಿಪಿಸಿಗಳಿಗೆ ಹಣವನ್ನು ಸಂಗ್ರಹಿಸಬೇಕಾಗಿತ್ತು.

ಯಾವುದೇ ಜಿಲ್ಲೆಗಳಲ್ಲಿ ಡಿಪಿಸಿ[3] ಕಾರ್ಯನಿರ್ವಹಿಸುತ್ತಿರಲಿಲ್ಲ ಮತ್ತು ಯಾವುದೇ ಸಭೆಗಳನ್ನು ನಡೆಸಲಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಕ್ರೋಢೀಕೃತ ಡಿಡಿಪಿಯನ್ನು ತಯಾರಿಸದಿರುವುದರಲ್ಲಿ ಪರಿಣಮಿಸಿತು. ಡಿಪಿಸಿಗಳು ಕಾರ್ಯನಿರ್ವಹಿಸದ ಕಾರಣ ವಲಯವಾರು ಯೋಜನೆಗಳನ್ನು ಸಿದ್ಧಪಡಿಸಲಾಗಿರಲಿಲ್ಲ.

ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಡಿಪಿಸಿ ಸಭೆಗಳನ್ನು ನಡೆಸಲಾಗಿಲ್ಲ ಮತ್ತು ಅದನ್ನು ಸೂಕ್ತ ಸಮಯದಲ್ಲಿ ನಡೆಸಲಾಗುವುದು ಎಂದು ರಾಜ್ಯ ಸರ್ಕಾರವು (ಮೇ 2023) ಉತ್ತರಿಸಿತು. ಸಾಂಕ್ರಾಮಿಕ ಪೂರ್ವದ ಅವಧಿಯಲ್ಲಿಯೂ ಸಹ ಡಿಪಿಸಿಗಳನ್ನು ರಚಿಸದಿರುವುದು ಮತ್ತು ಕಾರ್ಯನಿರ್ವಹಿಸದಿರುವುದು ಕಂಡುಬಂದಿರುವುದರಿಂದ ಈ ಉತ್ತರವು ಸ್ವೀಕಾರಾರ್ಹವಲ್ಲ.

ಸಂಪನ್ಮೂಲಗಳನ್ನು ಹೊಂದಿದ್ದರೂ, ಡಿ.ಡಿ.ಪಿಗಳನ್ನು ಸಿದ್ಧಪಡಿಸಲು ಡಿಪಿಸಿಗಳನ್ನು ರಚಿಸದಿರುವುದು ಮತ್ತು ನಡೆಸದಿರುವುದು ವಿವರಿಸಲಾಗದಂತಾಗಿದೆ.

1.6 ಆರ್ಥಿಕ ಅಧಿಕಾರಗಳ ನಿಯೋಜನೆ

ಪ್ರತಿ ನಾಲ್ಕು ನೂರು ಜನಸಂಖ್ಯೆಗೆ ಅಥವಾ ಪಂಚಾಯತ್ ಪ್ರದೇಶದ ಒಂದು ಭಾಗಕ್ಕೆ ಒಬ್ಬ ಸದಸ್ಯನಂತೆ ಗ್ರಾಮ ಪಂಚಾಯಿತಿಗಳು ಚುನಾಯಿತ ಸದಸ್ಯರನ್ನು ಒಳಗೊಂಡಿರುತ್ತದೆ. ಚುನಾಯಿತ ಸದಸ್ಯರಲ್ಲಿ ಇಬ್ಬರು ಸದಸ್ಯರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎಂದು ಆಯ್ಕೆ ಮಾಡಲಾಗುತ್ತದೆ. ಅಧ್ಯಕ್ಷರು ಗ್ರಾಮ ಪಂಚಾಯಿತಿಯ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ಪ್ರತಿ ಗ್ರಾಮ ಪಂಚಾಯಿತಿಯು ಚುನಾಯಿತ ಸದಸ್ಯರ ಹೊರತಾಗಿ ಸರ್ಕಾರದ ಅಧಿಕಾರಿಗಳಾದ ಪೂರ್ಣ ಕಾಲದ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಓ) ಮತ್ತು ಕಾರ್ಯದರ್ಶಿಯನ್ನು ಹೊಂದಿರುತ್ತದೆ ಮತ್ತು ಸರ್ಕಾರದಿಂದ ನೇಮಕಗೊಂಡ ಇತರ ಅಧಿಕಾರಿಗಳನ್ನು ಹೊಂದಿರುತ್ತದೆ.

ಕೆಪಿಆರ್ ಗ್ರಾಮ ಪಂಚಾಯಿತಿಗಳ (ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006, ನಿಯಮ77 ಮತ್ತು 80ರನ್ವಯ, ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಕಾರ್ಯಗಳಿಗೆ ಅಂದಾಜುಗಳ

---

2 ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಅಧಿನಿಯಮ 310(ಬಿ) ಅನ್ವಯ, ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆ ಹಾಗೂ ವಾರ್ಷಿಕ ಆರ್ಥಿಕ ಯೋಜನೆಯನ್ನು ಪರಿಶೀಲಿಸಲು ಕರ್ನಾಟಕ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರಚಿಸಬೇಕು. ಈ ಸಮಿತಿಗೆ ಮುಖ್ಯಮಂತ್ರಿ ಅಧ್ಯಕ್ಷರಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಹಣಕಾಸು ಇಲಾಖೆ ಹಾಗೂ ಯೋಜನೆ ವಿಭಾಗದ ಸಚಿವರು ಸದಸ್ಯರಾಗಿರುತ್ತಾರೆ.

3 ಲೆಕ್ಕಪರಿಶೋಧನೆಗೆ ಆಯ್ಕೆ ಮಾಡದ ಎಂಟು ಜಿಲ್ಲೆಗಳ ಪೈಕಿ, ಡಿಪಿಸಿಯನ್ನು ಐದು ಜಿಲ್ಲೆಗಳಲ್ಲಿ ರಚಿಸಲಾಗಿತ್ತು.

ಮಂಜೂರಾತಿಗೆ ಸಂಬಂಧಿಸಿದಂತೆ ಹಣಕಾಸಿನ ಅಧಿಕಾರಗಳನ್ನು ನಿಯೋಜಿಸಲು ಅವಕಾಶ ನೀಡುತ್ತದೆ. ವಿವರಗಳನ್ನು **ಕೋಷ್ಟಕ–1.2**ರಲ್ಲಿ ನೀಡಲಾಗಿದೆ. ಪರಿಶೀಲಿಸಿದ ಗ್ರಾಮ ಪಂಚಾಯಿತಿಗಳಲ್ಲಿ ಹಣಕಾಸಿನ ಅಧಿಕಾರಗಳ ನಿಯೋಜನೆಯನ್ನು ಅನುಸರಿಸಲಾಗುತ್ತಿತ್ತು.

ಕೋಷ್ಟಕ–1.2: ಹಣಕಾಸು ಅಧಿಕಾರಗಳ ನಿಯೋಗ

ವಿವರಗಳು	ಪ್ರಾಧಿಕಾರ	ಹಣಕಾಸು ಅಧಿಕಾರಗಳು
ತಾಂತ್ರಿಕ ಅನುಮೋದನೆ	ಗ್ರಾಮ ಪಂಚಾಯಿತಿ ಅಭಿಯಂತರರು	₹ 25,000/– ವರೆಗೆ
	ಜಿಲ್ಲಾ ಪಂಚಾಯಿತಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು	>₹ 25,000<₹ 4,00,000
	ಕಾರ್ಯನಿರ್ವಾಹಕ ಅಭಿಯಂತರರು	>₹ 4,00,000<₹ 10,00,000
	ಅಧೀಕ್ಷಕ ಅಭಿಯಂತರರು	₹ 10,00,000 ಮತ್ತು ಹೆಚ್ಚಿನದು
ಆಡಳಿತಾತ್ಮಕ ಅನುಮೋದನೆ	ಗ್ರಾಮ ಪಂಚಾಯಿತಿ ಅಧ್ಯಕ್ಷರು	ಗ್ರಾಮ ಪಂಚಾಯಿತಿ ಸಭೆಯಲ್ಲಿ ನಿರ್ಣಯದ ಮೂಲಕ ಅಂತಹ ಅಧಿಕಾರಗಳನ್ನು ಅಧ್ಯಕ್ಷರಿಗೆ ನಿಯೋಜಿಸಿದಲ್ಲಿ ₹5,000 ಮೀರದಂತೆ.
	ಗ್ರಾಮ ಪಂಚಾಯಿತಿ	>₹ 5,000<₹ 10,00,000
	ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ)	>₹ 10,00,000<₹ 30,00,000
	ರಾಜ್ಯ ಸರ್ಕಾರ	>₹ 30,00,000

ಆಧಾರ: ಕೆಪಿಆರ್ ಗ್ರಾಮ ಪಂಚಾಯಿತಿಗಳ (ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು

1.7 ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಲೆಕ್ಕಪತ್ರ ವ್ಯವಸ್ಥೆ

1.7.1 ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಪತ್ರ ವ್ಯವಸ್ಥೆ

ಗ್ರಾಮ ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳು ನಿಗದಿತ ನಮೂನೆಗಳಲ್ಲಿ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ವೆಚ್ಚದ ಲೆಕ್ಕಗಳು ಮತ್ತು ಬ್ಯಾಲೆನ್ಸ್ ಶೀಟ್ ಅನ್ನು ಒಳಗೊಂಡಿರುತ್ತದೆ. ಕೆಪಿಆರ್ ಗ್ರಾಮ ಪಂಚಾಯಿತಿಗಳ (ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006ರಲ್ಲಿ ವಿಧಿಸಿರುವಂತೆ ಡಬಲ್ ಎಂಟ್ರಿ ಅಕೌಂಟಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಲೆಕ್ಕಪತ್ರಗಳನ್ನು ಸಂಚಯ ಆಧಾರದ ಮೇಲೆ ತಯಾರಿಸಲಾಗುತ್ತದೆ. ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು ಮತ್ತು ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಯನ್ನು ಮುಂದಿನ ವರ್ಷ ಜೂನ್ 30ರೊಳಗಾಗಿ ಅದರ ಪರಿಗಣನೆ ಮತ್ತು ಅನುಮೋದನೆಗಾಗಿ ಗ್ರಾಮ ಪಂಚಾಯಿತಿಯ ಮುಂದೆ ಮಂಡಿಸಬೇಕು.

ಕರ್ನಾಟಕ ಸರ್ಕಾರವು ರಾಷ್ಟ್ರೀಯ ಮಾಹಿತಿ ಕೇಂದ್ರದ ಮೂಲಕ ಆಡಳಿತದಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸಲು ಮತ್ತು ಎಲ್ಲಾ ಮಾಹಿತಿಯನ್ನು ಲಭ್ಯವಾಗುವಂತೆ ಮಾಡಲು 'ಪಂಚತಂತ್ರ' ಎಂಬ ತಂತ್ರಾಂಶವನ್ನು ಅಭಿವೃದ್ಧಿಪಡಿಸಿತು. ಪಂಚತಂತ್ರವು ಡಬಲ್ ಎಂಟ್ರಿ ಅಕೌಂಟಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಮತ್ತು ಗ್ರಾಮ ಪಂಚಾಯಿತಿಗಳ ಮೂಲಭೂತ ಅಗತ್ಯಗಳನ್ನು ಪೂರೈಸಲು ಮೂರು ಹಂತದ ವಿನ್ಯಾಸವನ್ನು ಹೊಂದಿರುವ ವೆಬ್ ಆಧಾರಿತ ತಂತ್ರಾಂಶವಾಗಿದೆ. 2012–13ರಿಂದ ಜಾರಿಗೆ ಬರುವಂತೆ ಈ ತಂತ್ರಾಂಶವನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಅಳವಡಿಸಲಾಗಿದೆ. ಗ್ರಾಮ ಪಂಚಾಯಿತಿಯ ಆದಾಯ ಮತ್ತು ವೆಚ್ಚದ ಪಟ್ಟಿ ಮತ್ತು ಬ್ಯಾಲೆನ್ಸ್ ಶೀಟ್‌ನ್ನು ಪಂಚತಂತ್ರದಲ್ಲಿ ನೋಡಬಹುದಾಗಿದೆ. ಇಲಾಖೆಯು ನಿರ್ವಹಿಸುವ ವಿವಿಧ ವರದಿಗಳು ಸಹ ಪೋರ್ಟಲ್‌ನಲ್ಲಿ ಲಭ್ಯವಿವೆ.

ಎಲ್ಲಾ ಗ್ರಾಮ ಪಂಚಾಯಿತಿಗಳು ತಮ್ಮ ದೈನಂದಿನ ಲೆಕ್ಕಪತ್ರ ವಹಿವಾಟುಗಳಿಗಾಗಿ ಪಂಚತಂತ್ರವನ್ನು ಬಳಸುತ್ತಿದ್ದಾರೆ.

ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಪತ್ರ ನಿರ್ವಹಣೆಗಾಗಿ ಪಂಚತಂತ್ರ 2.0 ಅನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಅದು ಕಾರ್ಯನಿರ್ವಹಿಸುತ್ತಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಏಪ್ರಿಲ್ 2024).

1.7.2 ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಲೆಕ್ಕಪತ್ರ ವ್ಯವಸ್ಥೆ

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಹಣಕಾಸು ವರದಿಗೊಳಿಸುವಿಕೆಯು ಜವಾಬ್ದಾರಿಯ ಪ್ರಮುಖ ಅಂಶವಾಗಿದೆ. ನಿಧಿಗಳ ಸೆಳೆಯುವಿಕೆ, ಖರ್ಚು ಮಾಡುವಿಕೆ, ಲೆಕ್ಕಪತ್ರಗಳ ನಿರ್ವಹಣೆ, ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಲೆಕ್ಕಪತ್ರ ಸಲ್ಲಿಕೆ ಸಂಬಂಧಿತ ವಿಷಯಗಳು, ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, 1993, ಕರ್ನಾಟಕ ಜಿಲ್ಲಾ ಪಂಚಾಯತ್ (ಹಣಕಾಸು ಮತ್ತು ಲೆಕ್ಕಪತ್ರ) ನಿಯಮಗಳು, 1996, ಕರ್ನಾಟಕ ಪಂಚಾಯತ್ ರಾಜ್ ತಾಲ್ಲೂಕು ಪಂಚಾಯಿತಿಗಳು (ಹಣಕಾಸು ಮತ್ತು ಲೆಕ್ಕಪತ್ರ) ನಿಯಮಗಳು 1996, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಹಣಕಾಸು ಸಂಹಿತೆ, ಸಾದಿಲ್ವಾರು ವೆಚ್ಚ ಕೈಪಿಡಿ, ಕರ್ನಾಟಕ ಸಾರ್ವಜನಿಕ ಕಾಮಗಾರಿಗಳ ಲೆಕ್ಕಪತ್ರ ಸಂಹಿತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ, ಸ್ಟೋರ್ಸ್ ಮ್ಯಾನುಯಲ್, ಬಜೆಟ್ ಮ್ಯಾನುಯಲ್, ಇತರ ಇಲಾಖೆಯ ಮ್ಯಾನುಯಲ್‌ಗಳು, ಸ್ಥಾಯಿ ಆದೇಶಗಳು ಮತ್ತು ನಿರ್ದೇಶನಗಳ ಮೌಲ್ಯಾಧೀನವಾಗಿವೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳು, ರಾಜಸ್ವ, ಬಂಡವಾಳ, ಮತ್ತು ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ, ಐದು ಪಟ್ಟಿಗಳಲ್ಲಿ, ಕರ್ನಾಟಕ ಜಿಲ್ಲಾ ಪಂಚಾಯಿತಿ (ಹಣಕಾಸು ಮತ್ತು ಲೆಕ್ಕಪತ್ರ) ನಿಯಮಾವಳಿ, 1996ರ ನಿಯಮ 37(4) ಮತ್ತು **ಅನುಬಂಧ–I** ಹಾಗೂ ಕರ್ನಾಟಕ ಪಂಚಾಯತ್ ರಾಜ್ ತಾಲ್ಲೂಕು ಪಂಚಾಯತಿಗಳ (ಹಣಕಾಸು ಮತ್ತು ಲೆಕ್ಕಪತ್ರ) ನಿಯಮಾವಳಿ, 1996ರ ನಿಯಮ 30(4) ಮತ್ತು ಅನುಬಂಧದ ಪ್ರಕಾರ ತಯಾರಿಸಲಾಗುತ್ತವೆ. ಹದಿಮೂರನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಪಂಚಾಯತ್ ರಾಜ್ ಸಂಸ್ಥೆಗಳು ಭಾರತ ಸರ್ಕಾರದ ನಿರ್ದೇಶನದಂತೆ, 2011–12 ರಿಂದ ಮಾದರಿ ಪಂಚಾಯತ್ ಲೆಕ್ಕಪತ್ರ ವ್ಯವಸ್ಥೆಯನ್ನು ಅಳವಡಿಸಬೇಕಾಗಿದೆ.

ಜಿಲ್ಲಾ ಪಂಚಾಯಿತಿಗಳು 2011–12ರಿಂದ ಮಾದರಿ ಪಂಚಾಯತಿ ಲೆಕ್ಕಪತ್ರ ಪದ್ಧತಿಯಂತೆ(ಎಂಪಿಎಎಸ್) ಲೆಕ್ಕಗಳನ್ನು ತಯಾರಿಸುತ್ತಿವೆ. ಒಟ್ಟು 31 ಜಿಲ್ಲಾ ಪಂಚಾಯಿತಿಗಳ ಪೈಕಿ 30 ಜಿಲ್ಲಾ ಪಂಚಾಯಿತಿಗಳು ನಿರ್ಧರಿತ ನಮೂನೆಯಂತೆ ಎಂಪಿಎಎಸ್ ಅಲ್ಲಿ ಸಂಪೂರ್ಣವಾಗಿ ತಯಾರಿಸಿವೆ. ಆದರೆ, ಬೀದರ ಜಿಲ್ಲಾ ಪಂಚಾಯಿತಿಯು 2021–22ರಲ್ಲಿ ಎಂಪಿಎಎಸ್ ಅಲ್ಲಿ ಲೆಕ್ಕಪತ್ರಗಳನ್ನು ಸಲ್ಲಿಸಿಲ್ಲ. ಅಂತೆಯೇ, 2020–21ನೇ ಸಾಲಿನಲ್ಲಿ 42 ತಾಲ್ಲೂಕು ಪಂಚಾಯಿತಿಗಳು ಮತ್ತು 2021–22ನೇ ಸಾಲಿನಲ್ಲಿ 35 ತಾಲ್ಲೂಕು ಪಂಚಾಯಿತಿಗಳು, ವಾರ್ಷಿಕ ಲೆಕ್ಕಪತ್ರಗಳನ್ನು ಎಂಪಿಎಎಸ್ ಅಲ್ಲಿ ತಯಾರಿಸಿಲ್ಲದ ಮೂಲಕ ಅವುಗಳು ನಿಗದಿತ ಮಾನದಂಡಗಳನ್ನು ಪಾಲಿಸುವಲ್ಲಿ ವಿಫಲವಾಗಿದ್ದವು. ಈ ವಿವರಗಳನ್ನು **ಕೊಷ್ಟಕ–1.3**ರಲ್ಲಿ ನೀಡಲಾಗಿದೆ.

ಕೋಷ್ಟಕ–1.3: ಎಂಪಿಎಎಸ್ ಸ್ವರೂಪದಲ್ಲಿರುವ ತಾಲ್ಲೂಕು ಪಂಚಾಯಿತಿಯ ವಾರ್ಷಿಕ ಲೆಕ್ಕಪತ್ರಗಳ ಸ್ಥಿತಿ

ವರ್ಷ	ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿದ ತಾಲ್ಲೂಕು ಪಂಚಾಯಿತಿಗಳ ಸಂಖ್ಯೆ	ಎಂಪಿಎಎಸ್ ಸ್ವರೂಪದಲ್ಲಿ ಸಿದ್ಧಪಡಿಸದ ಖಾತೆಗಳ ಸಂಖ್ಯೆ
2019–20	162	42
2020–21	172	42
2021–22	171	35

ಆಧಾರ: ತಾಲ್ಲೂಕು ಪಂಚಾಯಿತಿ ವಾರ್ಷಿಕ ಲೆಕ್ಕಗಳು

ರಾಜ್ಯ ಸರ್ಕಾರವು 2024ರ ಏಪ್ರಿಲ್‌ನಲ್ಲಿ ನೀಡಿದ ಉತ್ತರದಲ್ಲಿ, ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ವಾರ್ಷಿಕ ಲೆಕ್ಕಪತ್ರಗಳನ್ನು ಎಂಪಿಎಎಸ್ ಅಲ್ಲಿ ತಯಾರಿಸಲು ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿತು.

1.7.2.1 ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿನ ಲೆಕ್ಕಪತ್ರಗಳ ಸ್ಥಿತಿ

ಕೆಪಿಆರ್ ಕಾಯ್ದೆ, 1993ರ ಅನ್ವಯ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ವರ್ಷ ಮುಗಿದ ಮೂರು ತಿಂಗಳೊಳಗೆ ಸಿದ್ಧಪಡಿಸಬೇಕು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಾಮಾನ್ಯ ಮಂಡಳಿಯು ಅನುಮೋದಿಸಬೇಕು ಮತ್ತು ಲೆಕ್ಕಪರಿಶೋಧನೆ ನಡೆಸಲು ಮಹಾಲೇಖಾಪಾಲರು/ಕೆಎಸ್ಎಎಡಿಯ ಪ್ರಧಾನ ನಿರ್ದೇಶಕರಿಗೆ ಕಳುಹಿಸಬೇಕು.

2019–20 ರಿಂದ 2021–22 ವರ್ಷಗಳವರೆಗೆ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿನ ವಿಳಂಬವನ್ನು **ಕೋಷ್ಟಕ–1.4**ರಲ್ಲಿ ಪ್ರದರ್ಶಿಸಲಾಗಿದೆ.

ಕೋಷ್ಟಕ–1.4: ಜಿಲ್ಲಾ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿನ ವಿಳಂಬ (ಮಾರ್ಚ್ 2023ರಂತೆ)

ವಿಳಂಬ	ಜಿಲ್ಲಾ ಪಂಚಾಯಿತಿಗಳ ಸಂಖ್ಯೆ			ತಾಲ್ಲೂಕು ಪಂಚಾಯಿತಿಗಳ ಸಂಖ್ಯೆ		
	2019–20	2020–21	2021–22	2019–20	2020–21	2021–22
ವಿಳಂಬವಿಲ್ಲ	3	3	3	7	20	35
1 ರಿಂದ 30 ದಿನಗಳು	2	4	6	46	42	34
31 ರಿಂದ 60 ದಿನಗಳು	7	7	5	18	28	22
61 ರಿಂದ 100 ದಿನಗಳು	12	5	10	14	17	17
100 ದಿನಗಳು ಮೀರಿದವುಗಳು	6	11	5	80	65	63
ಒಟ್ಟು ಸಲ್ಲಿಕೆ	30	30	29	165	172	171
ಸಲ್ಲಿಕೆಯಾಗಿಲ್ಲ	0	0	1	11	9	62

ಆಧಾರ: ಈ ಕಚೇರಿಯಿಂದ ವಾರ್ಷಿಕ ಲೆಕ್ಕಪತ್ರಗಳ ಸ್ವೀಕೃತಿಯ ಸಂಕಲನ.

ನಿಗದಿತ ಸಮಯದೊಳಗೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಂತೆ ಎಲ್ಲಾ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ ಎಂದು ರಾಜ್ಯ ಸರ್ಕಾರವು (ಏಪ್ರಿಲ್ 2024) ಉತ್ತರಿಸಿತು.

1.7.2.2 ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಲೆಕ್ಕಪತ್ರಗಳಲ್ಲಿನ ಕೊರತೆಗಳು

2020–21 ಮತ್ತು 2021–22 ಅವಧಿಯಲ್ಲಿ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಲೆಕ್ಕಪತ್ರಗಳಲ್ಲಿ ಕಂಡುಬಂದ ಗಮನಾರ್ಹ ನ್ಯೂನತೆಗಳನ್ನು ಕೆಳಗೆ ವಿವರಿಸಲಾಗಿದೆ:

- ರಾಜ್ಯ ಸರ್ಕಾರವು ಅರಣ್ಯ ವಿಭಾಗಗಳು ಮತ್ತು ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗಗಳಲ್ಲಿ ಲೆಟರ್ ಆಫ್ ಕ್ರೆಡಿಟ್ ವ್ಯವಸ್ಥೆಯನ್ನು ಹಿಂತೆಗೆದುಕೊಂಡಿತು (ಅಕ್ಟೋಬರ್ 2006 ಮತ್ತು ಜೂನ್ 2007). ಇದರ ಪರಿಣಾಮವಾಗಿ, ಎರಡೂ ವಿಭಾಗಗಳು ಚೆಕ್‌ಗಳನ್ನು ನೀಡುವುದನ್ನು ನಿಲ್ಲಿಸಿದ್ದವು. ಆದಾಗ್ಯೂ, 2020–21 ಮತ್ತು 2021–22 ವರ್ಷದ ಜಿಲ್ಲಾ ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳು **ಅನುಬಂಧ–1.5**ರಲ್ಲಿ ವಿವರಿಸಿರುವಂತೆ ಹಿಂದಿನ ಅವಧಿಗೆ ಸಂಬಂಧಿಸಿದ ಬಾಕಿಗಳನ್ನು ಪ್ರತಿಬಿಂಬಿಸುತ್ತಲೇ ಇದ್ದವು. ಇದು ಜಿಲ್ಲಾ ಪಂಚಾಯಿತಿಗಳು ನಗದೀಕರಿಸಿದ ಚೆಕ್‌ಗಳನ್ನು ಖಜಾನೆಗಳೊಂದಿಗೆ ಸಮನ್ವಯಗೊಳಿಸಿಲ್ಲ ಎಂಬುದನ್ನು ಸೂಚಿಸುತ್ತದೆ,

ಇದರ ಪರಿಣಾಮವಾಗಿ ವೆಚ್ಚದ ತಪ್ಪಾದ ವರದಿ ಮಾಡಲಾಗಿದೆ. ಈ ನ್ಯೂನತೆಗಳನ್ನು ಹಿಂದಿನ ಎಟಿಐಆರ್ (2017–18) ಮೂಲಕ ಸರ್ಕಾರದ ಗಮನಕ್ಕೆ ತರಲಾಗಿದ್ದರೂ, ಅವುಗಳನ್ನು ಸರಿಪಡಿಸಲು ಯಾವುದೇ ಕ್ರಮವನ್ನು ಪ್ರಾರಂಭಿಸಲಾಗಿಲ್ಲ.

- ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯಿತಿಗಳಿಂದ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸಸ್ಪೆನ್ಸ್ ಲೆಕ್ಕಗಳ ನಿರ್ವಹಣೆಯ ವ್ಯವಸ್ಥೆಯನ್ನು (ಸೆಪ್ಟೆಂಬರ್ 2004) ವರ್ಜಿಸಿದರೂ, ಅವರು **ಅನುಬಂಧ–1.6**ರಲ್ಲಿ ವಿವರಿಸಿರುವಂತೆ 2020–21 ಮತ್ತು 2021–22 ವರ್ಷಗಳ ಬಾಕಿಗಳನ್ನು ಬಿಂಬಿಸುವುದನ್ನು ಮುಂದುವರೆಸಿದರು.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳಲ್ಲಿನ ನ್ಯೂನತೆಗಳನ್ನು ರಾಜ್ಯ ಸರ್ಕಾರವು (ಏಪ್ರಿಲ್ 2024) ಒಪ್ಪಿಕೊಂಡಿತು.

1.8 ಹಣಕಾಸಿನ ಚಿತ್ರಣ

1.8.1 ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳು

ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳ ಮೂಲವು ಸ್ವಂತ ಆದಾಯ, ಎಸ್.ಎಫ್.ಸಿ ಅನುದಾನಗಳು, ಸಿ.ಎಫ್.ಸಿ ಅನುದಾನಗಳು, ರಾಜ್ಯ ಸರ್ಕಾರದ ಅನುದಾನಗಳು ಮತ್ತು ನಿರ್ವಹಣೆ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಭಾರತ ಸರ್ಕಾರದ ಅನುದಾನಗಳನ್ನು ಒಳಗೊಂಡಿದೆ. ಪ್ರಮುಖ ಯೋಜನೆಗಳ ನಿಧಿಯ ವಿವರಗಳನ್ನು **ಅನುಬಂಧ 1.7**ರಲ್ಲಿ ನೀಡಲಾಗಿದೆ.

2019–20 ನಿಂದ 2021–22ರ ಅವಧಿಯ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳ ಪ್ರವೃತ್ತಿಯನ್ನು **ಕೋಷ್ಟಕ–1.5**ರಲ್ಲಿ ತೋರಿಸಲಾಗಿದೆ.

ಕೋಷ್ಟಕ–1.5: ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳ ಪ್ರವೃತ್ತಿಗಳು ಮತ್ತು ಸಂಯೋಜನೆ

(₹ ಕೋಟಿಗಳಲ್ಲಿ)

ವಿವರಗಳು	2019–20	2020–21	2021–22
ಜಿಲ್ಲಾ ಪಂಚಾಯಿತಿ			
ರಾಜ್ಯ ಅನುದಾನಗಳು/ನಿಯೋಜಿಸಲಾದ ಆದಾಯ	172.07	172.07	172.07
ಕೇಂದ್ರ ಪ್ರಾಯೋಜಿತ ಯೋಜನೆಗಾಗಿ ಭಾರತ ಸರ್ಕಾರದಿಂದ ಅನುದಾನ	39.78	*4,671.21	**2,143.30
ಸಿ.ಎಫ್.ಸಿ	0	160.85	118.85
ಇತರ ಸ್ವೀಕೃತಿಗಳು	12,090.49	12,466.37	12,494.90
ಒಟ್ಟು	**12,302.34**	**17,470.50**	**14,929.12**
ತಾಲ್ಲೂಕು ಪಂಚಾಯಿತಿ			
ರಾಜ್ಯ ಅನುದಾನಗಳು/ನಿಯೋಜಿಸಲಾದ ಆದಾಯ	361.89	411.89	461.89
ಸಿ.ಎಫ್.ಸಿ	0	321.70	237.70
ಇತರ ಸ್ವೀಕೃತಿಗಳು	20,762.07	20,890.44	22783.94
ಒಟ್ಟು	**21,123.96**	**21,624.03**	**23,483.53**
ಗ್ರಾಮ ಪಂಚಾಯಿತಿ			
ಸ್ವಂತ ಆದಾಯ	688.71	683.02	812.20
ರಾಜ್ಯ ಅನುದಾನಗಳು/ ನಿಯೋಜಿಸಲಾದ ಆದಾಯ	902.99	902.99	902.99
ಸಿ.ಎಫ್.ಸಿ	2,507.88	2,734.45	2,020.45
ಇತರ ಸ್ವೀಕೃತಿಗಳು	2,337.80	2,072.84	2,113.41
ಒಟ್ಟು	**6,437.38**	**6,393.30**	**5,849.05**

ಆಧಾರ: ಐಎಫ್ಎ, ಆರ್ಡಿಪಿಆರ್

* ಅಂಕಿ ಅಂಶವು 30 ಜೆಡ್ಪಿಗಳಿಗೆ ಸಂಬಂಧಿಸಿದೆ, ** ಅಂಕಿ ಅಂಶವು 29 ಜೆಡ್ಪಿಗಳಿಗೆ (ತಾತ್ಕಾಲಿಕ) ಸಂಬಂಧಿಸಿದೆ. # ಜೆಡ್ಪಿ/ಟಿಪಿ/ಜಿಪಿಯಲ್ಲಿ ಉಂಟಾದ ಸಿಎಸ್ಎಸ್ ವೆಚ್ಚದ ಒಟ್ಟು ಅಂಕಿ ಅಂಶಗಳನ್ನು ಜೆಡ್ಪಿ ಅಡಿಯಲ್ಲಿ ಪ್ರದರ್ಶಿಸಲಾಗಿದೆ.

ಗ್ರಾಮ ಪಂಚಾಯಿತಿಗಳಿಗೆ ತೆರಿಗೆ ವಿಧಿಸುವ ಮತ್ತು ಶುಲ್ಕವನ್ನು ಸಂಗ್ರಹಿಸುವ ಮತ್ತು ಗ್ರಾಮ ಪಂಚಾಯಿತಿ ವಲಯದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅಧಿಕಾರವಿದೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಯೋಜನೆಗಳ ಅನುಷ್ಠಾನದಲ್ಲಿ ಮೇಲ್ವಿಚಾರಣಾ ಪಾತ್ರಗಳನ್ನು ನಿರ್ವಹಿಸುವ ಅಧಿಕಾರವನ್ನು ಮಾತ್ರ ನೀಡಲಾಗಿದೆ.

1.8.2 ಪಂಚಾಯಾತ್ ರಾಜ್ ಸಂಸ್ಥೆಗಳಿಂದ ಸಂಪನ್ಮೂಲಗಳ ಬಳಕೆ

2019–20 ರಿಂದ 2021–22 ಅವಧಿಯ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳ ಬಳಕೆಯ ಪ್ರವೃತ್ತಿಗಳನ್ನು **ಕೋಷ್ಟಕ–1.6**ರಲ್ಲಿ ನೀಡಲಾಗಿದೆ.

ಕೋಷ್ಟಕ–1.6: ಸಂಪನ್ಮೂಲಗಳ ಬಳಕೆ

(₹ ಕೋಟಿಗಳಲ್ಲಿ)

ವಿವರಗಳು	2019–20	2020–21	2021–22
ಜಿಲ್ಲಾ ಪಂಚಾಯಿತಿ			
ರಾಜ್ಯ ಅನುದಾನಗಳು/ನಿಯೋಜಿಸಲಾದ ಆದಾಯ/ಇತರ ಸ್ವೀಕೃತಿಗಳು	12,104.59	11,811.55	8476.47
ಸಿ.ಎಸ್.ಎಸ್.ಗಾಗಿ ಭಾರತ ಸರ್ಕಾರದಿಂದ ಅನುದಾನಗಳು	39.78	5,110.43^	3,610.92^^
ಸಿ.ಎಫ್.ಸಿ *	0	21.26	113.73
ಒಟ್ಟು	**12,144.37**	**16,943.24**	**12,201.12**
ತಾಲ್ಲೂಕು ಪಂಚಾಯಿತಿ			
ರಾಜ್ಯ ಅನುದಾನಗಳು/ನಿಯೋಜಿಸಲಾದ ಆದಾಯ/ಇತರ ಸ್ವೀಕೃತಿಗಳು	21,126.99	21,308.70	16,653.59
ಸಿ.ಎಫ್.ಸಿ	0	82.72	222.81
ಒಟ್ಟು	**21,126.99**	**21,391.42**	**16,876.40**
ವಿವರಗಳು	**2019–20**	**2020–21**	**2021–22**
ಗ್ರಾಮ ಪಂಚಾಯಿತಿ			
ರಾಜ್ಯ ಅನುದಾನಗಳು/ನಿಯೋಜಿಸಲಾದ ಆದಾಯ/ಇತರ ಸ್ವೀಕೃತಿಗಳು	4,841.06	5,040.75	2387.29
ಸಿ.ಎಫ್.ಸಿ	2,507.88	838.28	1884.16
ಒಟ್ಟು	**7,348.94**	**5,879.03**	**4,271.45**

ಆಧಾರ: ಐಎಫ್ಎ ಆರ್ಡಿಪಿಆರ್.

* ಮೂಲಭೂತ (ಅನಿರ್ಬಂಧಿತ) ಅನುದಾನ ಮತ್ತು ನಿರ್ಬಂಧಿತ ಅನುದಾನ ವೆಚ್ಚವನ್ನು ಒಳಗೊಂಡಿದೆ

^ ಅಂಕಿ ಅಂಶವು 30 ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದೆ

^^ 29 ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದೆ.

ಕೋಷ್ಟಕ–1.5 ಮತ್ತು **ಕೋಷ್ಟಕ–1.6**ರಿಂದ ನೋಡಬಹುದಾದಂತೆ, 2021–22 ವರ್ಷದಲ್ಲಿ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಲಭ್ಯವಿರುವ ನಿಧಿಯಡಿಯಲ್ಲಿ ಮಾಡಿದ ವೆಚ್ಚವು ಅನುಕ್ರಮವಾಗಿ ಶೇಕಡಾ 82, 72 ಮತ್ತು 73 ಆಗಿದ್ದು, ಇದು ನಿಧಿಯ ಕಡಿಮೆ ಬಳಕೆಯನ್ನು ಸೂಚಿಸುತ್ತದೆ.

1.8.3 ಸ್ಥಿರಾಸ್ತಿ ವರ್ಗಾವಣೆಯ ಮೇಲೆ ವಿಧಿಸಲಾದ ಸುಂಕದ ಬಿಡುಗಡೆ

ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 205ರ ಪ್ರಕಾರ, ಸ್ಥಿರಾಸ್ತಿಯ ವರ್ಗಾವಣೆಯ ಮೇಲಿನ ಸುಂಕವನ್ನು ಕರ್ನಾಟಕ ಮುದ್ರಾಂಕ ಕಾಯ್ದೆ, 1957 ವಿಧಿಸಿದ ಸುಂಕದ ಶೇಕಡಾ ಮೂರು ದರದಲ್ಲಿ ಹೆಚ್ಚುವರಿ ಶುಲ್ಕದ

ರೂಪದಲ್ಲಿ ವಿಧಿಸಲಾಗುತ್ತದೆ. ತಾಲ್ಲೂಕು ಪಂಚಾಯಿತಿ ಪ್ರದೇಶದ ವ್ಯಾಪ್ತಿಯೊಳಗೆ ಇರುವ ಸ್ಥಿರಾಸ್ತಿಯ ಮಾರಾಟ, ಉಡುಗೊರೆ, ಅಡಮಾನ, ವಿನಿಮಯ ಮತ್ತು ಶಾಶ್ವತವಾಗಿ ಗುತ್ತಿಗೆ ನೀಡುವ ಸಾಧನಗಳ ಮೇಲಿನ ವಹಿವಾಟುಗಳಿಗಾಗಿ ಸಂಗ್ರಹಿಸಲಾದ ಹೆಚ್ಚುವರಿ ಮುದ್ರಾಂಕ ಸುಂಕವನ್ನು (ಎ.ಎಸ್.ಡಿ) ರಾಜ್ಯದ ತಾಲ್ಲೂಕು ಪಂಚಾಯಿತಿಗಳಿಗೆ, ತಾಲ್ಲೂಕಿನ ಜನಸಂಖ್ಯೆಗೆ ಅನುಗುಣವಾಗಿ, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು (ಐಜಿಆರ್) ಸಂಗ್ರಹದ ವೆಚ್ಚದೆಡೆಗೆ ಶೇಕಡಾ 10 ರಷ್ಟು ಕಡಿತಗೊಳಿಸುತ್ತಾರೆ.

ಲೆಕ್ಕಪರಿಶೋಧನೆಯ ಪ್ರಕಾರ, 2020–21 ಮತ್ತು 2021–22ರಲ್ಲಿ ಅನುಕ್ರಮವಾಗಿ, 40 ಮತ್ತು 49 ನಿರ್ದಿಷ್ಟ ತಾಲ್ಲೂಕು ಪಂಚಾಯಿತಿಗೆ ಜಮೆಯಾದ ಎ.ಎಸ್.ಡಿ ಮೊತ್ತವು ನೋಂದಣಿ ಮಹಾಪರಿವೀಕ್ಷಕರು ತಾಲ್ಲೂಕು ಪಂಚಾಯಿತಿಗಳಲ್ಲಿ ಬಿಡುಗಡೆ ಮಾಡಿದ ಎ.ಎಸ್.ಡಿಗಿಂತ ಕಡಿಮೆಯಾಗಿದೆ ಮತ್ತು 2020–21 ಮತ್ತು 2021–22ರಲ್ಲಿ 32 ಮತ್ತು 18 ತಾಲ್ಲೂಕು ಪಂಚಾಯಿತಿಗಳಲ್ಲಿ, ಎ.ಎಸ್.ಡಿ ಯನ್ನು ಖಜಾನೆ ಜಾಲ ನಿರ್ವಹಣಾ ಕೇಂದ್ರವು ಜಮಾ ಮಾಡಿರುವುದಿಲ್ಲ.ಈ ವಿವರಗಳನ್ನು **ಅನುಬಂಧ 1.8**ರಲ್ಲಿ ನೀಡಲಾಗಿದೆ.

ವಿವಿಧ ತಾಲ್ಲೂಕು ಪಂಚಾಯಿತಿಗಳಿಗೆ ಐಜಿಆರ್‌ರವರಿಂದ ಹಂಚಿಕೆಯಾದ ಎ.ಎಸ್.ಡಿಯನ್ನು ಕ್ರೆಡಿಟ್ ಮಾಡದಿರುವ ಕಾರಣಗಳು ದಾಖಲೆಗಳಿಂದ ಹೊರಬಂದಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಸ್ವೀಕರಿಸುವಾಗ (ಜೂನ್ 2024), ಹಂಚಿಕೆಯಾದ ಆದಾಯವನ್ನು ತಾಲ್ಲೂಕು ಪಂಚಾಯಿತಿಗಳಿಗೆ ಜಮಾ ಮಾಡದಿರಲು ಕಾರಣಗಳನ್ನು ಒದಗಿಸಲಿಲ್ಲ.

1.8.4 ಪಂಚಾಯತ್ ರಾಜ್ ಸಂಸ್ಥೆಯ ನಿಯೋಜಿತ ರಾಜಸ್ವದ ವರ್ಗಾವಣೆಯ ಸ್ಥಿತಿಗತಿ

- 14ನೇ ಸಿ.ಎಫ್.ಸಿಯು ರಾಜ್ಯಗಳು ತಮ್ಮ ಸ್ಥಿತಿಯನ್ನು ಸಮೀಕ್ಷಿಸಬೇಕು ಮತ್ತು ಪುರೋಭಿವೃದ್ಧಿ ತೆರಿಗೆ (ಅಭಿವೃದ್ಧಿ ಶುಲ್ಕಗಳು) ವಿಧಿಸಲು ನಿಯಮಗಳ ಸ್ಪಷ್ಟ ಚೌಕಟ್ಟನ್ನು ಸಿದ್ಧಪಡಿಸಬೇಕು ಎಂದು ಶಿಫಾರಸು ಮಾಡಿದೆ.

  ಸರ್ಕಾರವು ಯಾವುದೇ ಪುರೋಭಿವೃದ್ಧಿ ತೆರಿಗೆ (ಅಭಿವೃದ್ಧಿ ಶುಲ್ಕಗಳು) ಚೌಕಟ್ಟನ್ನು ಸಿದ್ಧಪಡಿಸಿಲ್ಲ ಮತ್ತು ಕೆಪಿಆರ್ ಕಾಯ್ದೆಯಲ್ಲಿ ಅಂತಹ ನಿಬಂಧನೆ ಅಸ್ತಿತ್ವದಲ್ಲಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ಆದಾಗ್ಯೂ, ಕೆ.ಎಂ.ಸಿ ಕಾಯ್ದೆಯಲ್ಲಿ ಅಂತಹ ನಿಬಂಧನೆಯಿದ್ದು ನಗರ ಸ್ಥಳೀಯ ಸಂಸ್ಥೆಗಳಿಗೆ ಅಂತಹ ತೆರಿಗೆಯನ್ನು ವಿಧಿಸಲು ಮತ್ತು ಸಂಗ್ರಹಿಸಲು ಅಧಿಕಾರ ನೀಡುತ್ತದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಅನುಗುಣವಾಗಿ, ಪಂಚಾಯತ್ ರಾಜ್ ಸಂಸ್ಥೆಗಳಿಗೂ ಸಹ ಅಂತಹ ರಾಜಸ್ವದ ಸಂಗ್ರಹಣೆಗೆ ಅಧಿಕಾರ ನೀಡಬಹುದು.

- 14ನೇ ಸಿ.ಎಫ್.ಸಿಯು ವೃತ್ತಿಪರ ತೆರಿಗೆಯು ಸ್ಥಳೀಯ ಸಂಸ್ಥೆಗಳಿಗೆ ಆದಾಯದ ಪ್ರಮುಖ ಮೂಲವಾಗಬಹುದು ಎಂದು ವಿಧಿಸಿತು ಮತ್ತು ಈ ತೆರಿಗೆಯನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಲು ಶಿಫಾರಸು ಮಾಡಿತು. ಇದಲ್ಲದೆ, 15ನೇ ಸಿ.ಎಫ್.ಸಿಯು ಸಂವಿಧಾನದ 276 (2) ನೇ ವಿಧಿಯನ್ನು ತಿದ್ದುಪಡಿ ಮಾಡುವ ಮೂಲಕ ವೃತ್ತಿಪರ ತೆರಿಗೆಯ ಮಿತಿಗಳನ್ನು ಹೆಚ್ಚಿಸಲು ಒತ್ತು ನೀಡಿದೆ.

  ಈ ಆದಾಯವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿಯೋಜಿಸಿರುವ ತಮಿಳುನಾಡು, ಕೇರಳ, ಹರಿಯಾಣ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಒಡಿಶಾದಂತಹ ರಾಜ್ಯಗಳಿಗಿಂತ ಭಿನ್ನವಾಗಿ, ರಾಜ್ಯ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವೃತ್ತಿಪರ ತೆರಿಗೆಯನ್ನು ನಿಯೋಜಿಸಿಲ್ಲ ಅಥವಾ ಮಿತಿಗಳನ್ನು ಹೆಚ್ಚಿಸಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯದಲ್ಲಿ ಈ ರಾಜಸ್ವವನ್ನು ನಿಯೋಜನೆ ಮಾಡದಿರುವುದು ಆ ಮಟ್ಟಿಗೆ ಆದಾಯದ ನಷ್ಟಕ್ಕೆ ಕಾರಣವಾಯಿತು.

- ಕೆಪಿಆರ್ ಕಾಯ್ದೆಯ ಪರಿಚ್ಛೇಧ 69ರ ಪ್ರಕಾರ, ಗ್ರಾಮ ಪಂಚಾಯಿತಿಯು ಪರವಾನಗಿ ಶುಲ್ಕವನ್ನು ಸಂಗ್ರಹಿಸುವ ಮೂಲಕ ನೀಡಿದ ಅಥವಾ ನವೀಕರಿಸಿದ ಪರವಾನಗಿ ಅಡಿಯಲ್ಲಿ ಪರಿಚ್ಛೇಧ 68 ಮತ್ತು 69ರಲ್ಲಿ ಉಲ್ಲೇಖಿಸಲಾದ ಅಂಗಡಿಯನ್ನು ಹೊರತುಪಡಿಸಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯೊಳಗಿನ ಯಾವುದೇ ಸ್ಥಳವನ್ನು ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಅಂಗಡಿಯಾಗಿ ಬಳಸಲಾಗುವುದಿಲ್ಲ.

  ಲೆಕ್ಕಪರಿಶೋಧನೆಯ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಾರ್ಡ್ ಗಳಿಂದ ಮಾರುಕಟ್ಟೆ ಶುಲ್ಕವನ್ನು ಸಂಗ್ರಹಿಸಲಿಲ್ಲ ಎಂದು ಪರೀಕ್ಷಾ ಪರಿಶೀಲಿಸಿದ ಘಟಕಗಳಲ್ಲಿ ಲೆಕ್ಕಪರಿಶೋಧನೆಯು ಗಮನಿಸಿದೆ, ಇದರಲ್ಲಿ ಕೃಷಿ ಇಲಾಖೆಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 1968ರ ನಿಯಮ 76 (1)ರ ಅಡಿಯಲ್ಲಿ ಅಂತಹ ಪರವಾಗಿ ಶುಲ್ಕವನ್ನು ಸಂಗ್ರಹಿಸಿದೆ. ಕರ್ನಾಟಕ ಪಂಚಾಯತ್ ರಾಜ್ ನಿಬಂಧನೆಗಳನ್ನು ಜಾರಿಗೆ ತಂದ ಪರಿಣಾಮವಾಗಿ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಮತ್ತು ಅಭಿವೃದ್ಧಿ ನಿಯಮಗಳನ್ನು ತಿದ್ದುಪಡಿ ಮಾಡಲಿಲ್ಲ, ಇದರಿಂದಾಗಿ ಗ್ರಾಮ ಪಂಚಾಯಿತಿಗಳಿಗೆ ಆದಾಯದ ನಷ್ಟವಾಯಿತು.

1.9 ಪಂಚಾಯತ್ ರಾಜ್ ಸಂಸ್ಥೆಗಳ ಆಂತರಿಕ ನಿಯಂತ್ರಣ ವ್ಯವಸ್ಥೆ

ಆಂತರಿಕ ನಿಯಂತ್ರಣ ಕಾರ್ಯವಿಧಾನವು ಸಂಸ್ಥೆಯ ಅವಿಭಾಜ್ಯ ಅಂಗವಾಗಿದೆ, ಇದು ಅದರ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ಅದರ ಉದ್ದೇಶಗಳನ್ನು ಸಾಧಿಸಲು ನೆರವು ನೀಡುತ್ತದೆ. ಕಾಯಿದೆಗಳು ಮತ್ತು ನಿಯಮಗಳ ಸರಿಯಾದ ಅನುಪಾಲನೆಯ ಸಮಂಜಸವಾದ ಭರವಸೆಯನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ವಿವಿಧ ಆಂತರಿಕ ನಿಯಂತ್ರಣ ಕ್ರಮಗಳು ಅಕ್ರಮಗಳ ಅಪಾಯವನ್ನು ಕಡಿಮೆ ಮಾಡುತ್ತವೆ.

ನಿಯಮಗಳ ಪ್ರಕಾರ, ಪ್ರಾಥಮಿಕ ಲೆಕ್ಕಪರಿಶೋಧಕರು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರೊಂದಿಗೆ ಸಮಾಲೋಚಿಸಿ ಸಂಸ್ಥೆಯಲ್ಲಿ ಆಂತರಿಕ ನಿಯಂತ್ರಣದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು. ಕೆಎಸ್ಎಎಡಿ ಲೆಕ್ಕಪರಿಶೋಧನಾ ಕೈಪಿಡಿಯ ಎರಡನೇ ಅಧ್ಯಾಯವು (ಲೆಕ್ಕಪರಿಶೋಧನಾ ಪರಿಕಲ್ಪನೆಗಳು) ಕ್ರಮಬದ್ಧ, ನೈತಿಕ, ಆರ್ಥಿಕ ದಕ್ಷತೆಯನ್ನು ಮತ್ತು ಪರಿಣಾಮಕಾರಿ ಕಾರ್ಯಾಚರಣೆಗಳು, ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸುವುದು, ಹೊಣೆಗಾರಿಕೆಯ ಕಟ್ಟುಪಾಡುಗಳನ್ನು ಪೂರೈಸುವುದು, ನಷ್ಟ, ದುರುಪಯೋಗ ಮತ್ತು ಹಾನಿಯಿಂದ ಸಂಪನ್ಮೂಲಗಳನ್ನು ರಕ್ಷಿಸುವುದು, ಕಾರ್ಯಗತಗೋಳಿಸಲು ಅಳವಡಿಸಿಕೊಳ್ಳಬೇಕಾದ ಆಂತರಿಕ ನಿಯಂತ್ರಣ ಚೌಕಟ್ಟಿನ ಬಗ್ಗೆ ವಿವರಗಳನ್ನು ನೀಡುತ್ತದೆ. ಕೈಪಿಡಿಯಲ್ಲಿ ನೀಡಲಾದ ಅಭ್ಯಾಸಗಳ ಜೊತೆಗೆ, ಸಲ್ಲಿಕೆಗಳ ಕ್ಯಾಲೆಂಡರ್ ಗಳ ನಿರ್ವಹಣೆ ಮತ್ತು ವಿವಿಧ ಸ್ಥಳೀಯ ಲೆಕ್ಕಪರಿಶೋಧನಾ ವಲಯಗಳ ನಡುವಿನ ಕೆಲಸದ ಸಹವರ್ತಿಗಳಿಂದ ವಿಮರ್ಶೆಯನ್ನು (Peer review) ಸಹ ಅಳವಡಿಸಿಕೊಳ್ಳಲು ಪರಿಗಣಿಸಬಹುದು.

ರಾಜ್ಯ ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಸ್ಥಾಪಿಸುವ ಅಗತ್ಯವಿದೆ. ಆದಾಗ್ಯೂ, ಅದನ್ನು ರಚಿಸಲಾಗಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ.

ಜಿಲ್ಲೆಗಳಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಆಯಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಲೆಕ್ಕಪತ್ರ ಅಧಿಕಾರಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ರಾಜ್ಯ ಸರ್ಕಾರವು (ಏಪ್ರಿಲ್ 2024) ಹೇಳಿದೆ. ಸಿಬ್ಬಂದಿ ಕೊರತೆಯಿಂದಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ರಚಿಸುವುದು ಸಾಕಷ್ಟು ಅನುಕೂಲಕರವಾಗಿಲ್ಲ.

1.9.1 ವಿವಿಧ ತಾಲ್ಲೂಕು ಪಂಚಾಯಿತಿಗಳಿಂದ ನಗದು ಪುಸ್ತಕ ಹೊಂದಾಣಿಕೆ ನಡೆಸದಿರುವುದು

ಕೆ.ಎಫ್.ಸಿ.ಯ 293(ಬಿ) ಮತ್ತು 329ನೇ ಅನುಚ್ಛೇಧ ಪ್ರಕಾರ, ತಾಲ್ಲೂಕು ಪಂಚಾಯಿತಿಗಳು ಪ್ರತಿ ತಿಂಗಳ ಕೊನೆಯಲ್ಲಿ ಮತ್ತು ಪ್ರತಿ ವರ್ಷದ ಕೊನೆಯಲ್ಲಿ ನಗದು ಪುಸ್ತಕದ ಬಾಕಿ ಮತ್ತು ಬ್ಯಾಂಕ್ ಬಾಕಿಗಳ ನಡುವಿನ ವ್ಯತ್ಯಾಸವನ್ನು ಆಯಾ ಯೋಜನೆಯ ನಗದು ಪುಸ್ತಕದಲ್ಲಿ ಸಮನ್ವಯಗೊಳಿಸಬೇಕಾಗುತ್ತದೆ.

ಆದಾಗ್ಯೂ, 2021–22 ವರ್ಷದ ಪರೀಕ್ಷಾ ಪರಿಶೀಲಿಸಿದ ತಾಲ್ಲೂಕು ಪಂಚಾಯಿತಿಗಳಲ್ಲಿ, ಆಂತರಿಕ ನಿಯಂತ್ರಣ ವ್ಯವಸ್ಥೆಗಳು ಅಸಮರ್ಪಕವಾಗಿವೆ ಎಂದು ಕಂಡುಬಂದಿತು, ಉದಾಹರಣೆಗೆ ಯೋಜನೆಯ ನಗದು ಪುಸ್ತಕವನ್ನು ಸಮನ್ವಯಗೊಳಿಸದಿರುವುದು, **ಕೋಷ್ಟಕ–1.7**ರಲ್ಲಿ ಕೆಳಗೆ ವಿವರಿಸಲಾಗಿದೆ.

ಕೋಷ್ಟಕ–1.7: ವಿವಿಧ ತಾಲ್ಲೂಕು ಪಂಚಾಯಿತಿಗಳಲ್ಲಿ ಯೋಜನೆಯ ನಗದು ಪುಸ್ತಕಗಳ ಸಮನ್ವಯ ಮಾಡಿಕೊಳ್ಳದ ವಿವರಗಳು

ಜಿಲ್ಲೆಯ ಹೆಸರು	ತಾಲ್ಲೂಕು ಪಂಚಾಯಿತಿ ಹೆಸರುಗಳು	ಯೋಜನೆಯ ಹೆಸರು
ವಿಜಯನಗರ	ಹೊಸಪೇಟೆ	ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಸ್ವಚ್ಛ ಭಾರತ ಮಿಷನ್, ಕಾರ್ಯನಿರ್ವಾಹಕ ಅಧಿಕಾರಿ– ತಾಲ್ಲೂಕು ಪಂಚಾಯತ್–ಸಂಸ್ಥಾಪನಾ ವಿಭಾಗ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ –ತರಬೇತಿ, ಮೀಟಿಂಗ್ ಹಾಲ್ ಬಾಡಿಗೆ ಮತ್ತು ಹಂಪಿ ಉತ್ಸವ.
ತುಮಕೂರು	ಕೊರಟಗೆರೆ	ರಾಜೀವ್ ಗಾಂಧಿ ಚೈತನ್ಯ ಯೋಜನೆ., ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಅಂಗನವಾಡಿ, 15ನೇ ಹಣಕಾಸು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಮತ್ತು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ. ತರಬೇತಿ.
ಕಲಬುರಗಿ	ಸೇಡಂ	ವಸತಿ, 15ನೇ ಹಣಕಾಸು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಸ್ವಚ್ಛ ಭಾರತ ಮಿಷನ್.
ಕೊಪ್ಪಳ	ಕೊಪ್ಪಳ	12ನೇ ಹಣಕಾಸು, 13ನೇ ಹಣಕಾಸು, ಗ್ರಾಮ ಸ್ವರಾಜ್, ಸ್ತ್ರೀ ಶಕ್ತಿ ಯೋಜನೆ, ಸಾಮಾನ್ಯ ಖಾತೆ ಮತ್ತು ಜೀವವೈವಿಧ್ಯ.
	ಗಂಗಾವತಿ	ಸಾಮಾನ್ಯ ಖಾತೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ, 15ನೇ ಹಣಕಾಸು, ಅಂಗನವಾಡಿ ಶೌಚಾಲಯ, 12ನೇ ಹಣಕಾಸು, 13ನೇ ಹಣಕಾಸು ಮತ್ತು ಸ್ವಚ್ಛ ಭಾರತ ಮಿಷನ್.
ವಿಜಯಪುರ	ವಿಜಯಪುರ	15ನೇ ಹಣಕಾಸು, ಸುವರ್ಣ ಗ್ರಾಮೋದಯ, ಸ್ವಚ್ಛ ಭಾರತ ಮಿಷನ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ರಾಜೀವ್ ಗಾಂಧಿ ಚೈತನ್ಯ ಯೋಜನೆ ಮತ್ತು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ–ತರಬೇತಿ.
	ಸಿಂದಗಿ	ಸ್ವಚ್ಛ ಭಾರತ ಮಿಷನ್, 15ನೇ ಹಣಕಾಸು ಮತ್ತು ವಸತಿ ಯೋಜನೆ.
	ಇಂಡಿ	15ನೇ ಹಣಕಾಸು, 13ನೇ ಹಣಕಾಸು, ಎಸ್.ಡಿ.ಪಿ, ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ತಾಲ್ಲೂಕು ಪಂಚಾಯಿತಿ ಕ್ವಾರ್ಟರ್ಸ್, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ತರಬೇತಿ, ಜೀವವೈವಿಧ್ಯ ಮತ್ತು ಸ್ವಚ್ಛ ಭಾರತ ಮಿಷನ್.
	ಬಸವನಬಾಗೇವಾಡಿ	15ನೇ ಹಣಕಾಸು, ವಾಣಿಜ್ಯ ಸಂಕೀರ್ಣ, ಸಾಮರ್ಥ್ಯ ಸೌಧ, ಸಾಮರ್ಥ್ಯ ಸೌಧ ಬಾಡಿಗೆ, ಸ್ವಚ್ಛ ಭಾರತ ಮಿಷನ್, ಸುವರ್ಣ ಗ್ರಾಮೋದಯ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ–ತರಬೇತಿ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಆಡಳಿತ.

ಜಿಲ್ಲೆಯ ಹೆಸರು	ತಾಲ್ಲೂಕು ಪಂಚಾಯಿತಿ ಹೆಸರುಗಳು	ಯೋಜನೆಯ ಹೆಸರು
	ಮುದ್ದೇಬಿಹಾಳ	15ನೇ ಹಣಕಾಸು, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರ ಗೌರವಧನ, ಸ್ವಚ್ಛ ಭಾರತ ಮಿಷನ್, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ–ತರಬೇತಿ, ಜೀವವೈವಿಧ್ಯತೆ, ತಾಲ್ಲೂಕು ಪಂಚಾಯಿತಿ ಅಂಗಡಿ ಬಾಡಿಗೆ, ಸುವರ್ಣ ಗ್ರಾಮೋದಯ, ಗ್ರಾಮ ಸ್ವರಾಜ್, 12ನೇ ಹಣಕಾಸು (ಕಟ್ಟಡ ಮತ್ತು ನಿರ್ವಹಣೆ ಮತ್ತು 12ನೇ ಹಣಕಾಸು).

ಆಧಾರ: ಪರಿಶೀಲಿಸಲಾದ ತಾಲ್ಲೂಕು ಪಂಚಾಯಿತಿಗಳ ದಾಖಲೆಗಳು

ನಿಗದಿತ ಸಮಯದೊಳಗೆ ಸಮನ್ವಯ ಮತ್ತು ವರ್ಷಾಂತ್ಯದ ಪ್ರಕ್ರಿಯೆಯನ್ನು ಕೈಗೊಳ್ಳಲು ಸಭೆಗಳನ್ನು ನಡೆಸಲಾಗಿದೆ ಎಂದು ರಾಜ್ಯ ಸರ್ಕಾರ (ಜೂನ್ 2024) ಹೇಳಿದೆ.

1.10 ಜಾಗೃತಿಯ ಕಾರ್ಯತಂತ್ರ

1.10.1 ಒಂಬುಡ್ಸ್ಮನ್

ಹದಿಮೂರನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳ ವಿರುದ್ಧದ ಭ್ರಷ್ಟಾಚಾರ ಮತ್ತು ದುರಾಡಳಿತದ ದೂರುಗಳ ತನಿಖೆಗಾಗಿ ಸ್ವತಂತ್ರ ಸ್ಥಳೀಯ ಸಂಸ್ಥೆ ಒಂಬುಡ್ಸ್ಮನ್ ವ್ಯವಸ್ಥೆಯನ್ನು ಸ್ಥಾಪಿಸುವ ಅಗತ್ಯವಿತ್ತು. ಒಂಬುಡ್ಸ್ಮನ್ ಅಂತಹ ತನಿಖೆಗಳ ವರದಿಗಳನ್ನು ಲೋಕಾಯುಕ್ತರಿಗೆ ಸಲ್ಲಿಸುತ್ತಾರೆ ಮತ್ತು ಅವರು ತಮ್ಮ ಶಿಫಾರಸ್ಸುಗಳೊಂದಿಗೆ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸುತ್ತಾರೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 ರ ಪರಿಚ್ಛೇಧ 30, ಪ್ರತಿ ಜಿಲ್ಲೆಯಲ್ಲೂ ಅರ್ಜಿದಾರರಿಂದ ದೂರುಗಳನ್ನು ಸ್ವೀಕರಿಸಲು, ತನಿಖೆ ನಡೆಸಲು ಮತ್ತು ತೀರ್ಪು ನೀಡಲು ಪ್ರತಿಯೊಂದು ಜಿಲ್ಲೆಗೆ ಒಂಬುಡ್ಸ್ಮನ್ ಅನ್ನು ನೇಮಕಮಾಡುವಂತೆ ರಾಜ್ಯಗಳಿಗೆ ವಿಧಿಸುತ್ತದೆ. ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಒಂಬುಡ್ಸ್ಮನ್ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ, ಅವರನ್ನು ಎರಡು ವರ್ಷಗಳ ಅವಧಿಗೆ ನೇಮಿಸಲಾಗುತ್ತದೆ ಹಾಗು ಅವಧಿಯನ್ನು ಮತ್ತೆರಡು ವರ್ಷಗಳವರೆಗೆ ವಿಸ್ತರಿಸಬಹುದಾಗುತ್ತದೆ.

ಫೆಬ್ರವರಿ 2023ರ ಹೊತ್ತಿಗೆ, 31 ಜಿಲ್ಲೆಗಳಿಗೆ 30 ಒಂಬುಡ್ಸ್ಮನ್‌ಗಳನ್ನು ನೇಮಿಸಲಾಯಿತು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಒಂಬುಡ್ಸ್ಮನ್‌ಅನ್ನು 2021–22 ಸಮಯದಲ್ಲಿ ನೇಮಿಸಲಾಯಿತು.

ಒಂಬುಡ್ಸ್ಮನ್ ರವರು ಯೋಜನೆಯ ಅನುಷ್ಠಾನದಲ್ಲಿನ ಎಲ್ಲಾ ದೂರುಗಳ ಬಗ್ಗೆ ವಿಚಾರಣೆ ನಡೆಸುತ್ತಾರೆ ಮತ್ತು ದುರುಪಯೋಗಪಡಿಸಿಕೊಂಡ ಮೊತ್ತದ ವಸೂಲಿಗೆ ಶಿಫಾರಸು ಮಾಡುತ್ತಾರೆ. ಆದೇಶದ ಪ್ರಕಾರ, ಸದರಿ ಮೊತ್ತವನ್ನು ಮರುಪಡೆಯಬೇಕು ಮತ್ತು ಆರು ತಿಂಗಳೊಳಗೆ ಶಿಸ್ತಿನ ಕ್ರಮಗಳನ್ನು ಪೂರ್ಣಗೊಳಿಸಬೇಕು.

ಮಾರ್ಚ್ 2022 ರ ಹೊತ್ತಿಗೆ, ₹ 11.81 ಕೋಟಿ ಮೊತ್ತದ ವಸೂಲಿಗೆ ಶಿಫಾರಸು ಮಾಡಲಾಗಿದ್ದು, ಅದರಲ್ಲಿ ₹ 3.51 ಕೋಟಿ ಮೊತ್ತವನ್ನು ವಾಸ್ತವವಾಗಿ ಮರುಪಡೆಯಲಾಗಿದೆ ಮತ್ತು ₹ 8.3 ಕೋಟಿ ಮೊತ್ತದ ವಸೂಲಿಯು ಬಾಕಿ ಉಳಿದಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು (ಏಪ್ರಿಲ್ 2024) ಅಂಗೀಕರಿಸಿತು.

1.10.2 ಸಾಮಾಜಿಕ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರವು ಅಧಿಸೂಚನೆ ಹೊರಡಿಸಿ (ಜನವರಿ 2012) ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳು 2011ರನ್ನು ಜಾರಿಗೆ ತಂದಿತು. ಅದರಂತೆ, ನಿರ್ದೇಶಕರ ನೇತೃತ್ವದಲ್ಲಿ ಸಾಮಾಜಿಕ

ಲೆಕ್ಕಪರಿಶೋಧನಾ ನಿರ್ದೇಶನಾಲಯವನ್ನು ರಚಿಸಲಾಯಿತು ಮತ್ತು ಸಂಘಗಳ ನೋಂದಣಿ ಕಾಯ್ದೆ, 1960ರ ಅಡಿಯಲ್ಲಿ (ಮೇ 2012) ನೋಂದಾಯಿಸಲಾಯಿತು. 2020–21 ಮತ್ತು 2021–22 ವರ್ಷಗಳಲ್ಲಿ ಕೈಗೊಂಡ ಸಾಮಾಜಿಕ ಲೆಕ್ಕಪರಿಶೋಧನೆಯ ವಿವರಗಳನ್ನು **ಕೋಷ್ಟಕ–1.8**ರಲ್ಲಿ ನೀಡಲಾಗಿದೆ.

ಕೋಷ್ಟಕ–1.8: ನಡೆಸಿದ ಸಾಮಾಜಿಕ ಲೆಕ್ಕಪರಿಶೋಧನೆಯ ವಿವರಗಳು

ಕ್ರಮ ಸಂಖ್ಯೆ	ಯೋಜನೆಯ ಹೆಸರುಗಳು	ಸಾಮಾಜಿಕ ಲೆಕ್ಕಪರಿಶೋಧನೆ ನಡೆದಿದೆಯೋ ಇಲ್ಲವೋ	ಅಧ್ಯಾದೇಶ	ಆವರ್ತನ	ಲೆಕ್ಕಪರಿಶೋಧನೆ ಮಾಡಲಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ	
					2020–21	2021–22
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂಜಿಎನ್‌ಆರ್‌ಇಜಿಎ)	ಹೌದು	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005	ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ವರ್ಷಕ್ಕೆ ಎರಡು ಬಾರಿ	ಮೊದಲ ಸುತ್ತಿನಲ್ಲಿ 3,055 ಗ್ರಾಮ ಪಂಚಾಯಿತಿಗಳು	ಮೊದಲ ಸುತ್ತಿನಲ್ಲಿ 5,916 ಗ್ರಾಮ ಪಂಚಾಯಿತಿಗಳು (ಒಟ್ಟು ಗ್ರಾಮ ಪಂಚಾಯಿತಿಗಳ ಶೇಕಡಾ 50ರಷ್ಟು ಗುರಿ)
					2ನೇ ಸುತ್ತಿನಲ್ಲಿ 5,862 ಗ್ರಾಮ ಪಂಚಾಯಿತಿಗಳು	2ನೇ ಸುತ್ತಿನಲ್ಲಿ 5,868 ಗ್ರಾಮ ಪಂಚಾಯಿತಿಗಳು
2	14ನೇ/15ನೇ ಹಣಕಾಸು ಆಯೋಗ	ಹೌದು	ತರಬೇತಿಯ ಸಮಯದಲ್ಲಿ ಹೊರಡಿಸಲಾದ ಮಾರ್ಗಸೂಚಿಗಳು	ವರ್ಷಕ್ಕೆ ಒಮ್ಮೆ	5,446 ಗ್ರಾಮ ಪಂಚಾಯಿತಿಗಳು	5,916 ಗ್ರಾಮ ಪಂಚಾಯಿತಿಗಳು
3	ಪ್ರಧಾನ ಮಂತ್ರಿ ಆವಾಸ್ ಯೋಜನೆ–ಗ್ರಾಮೀಣ (ಪಿಎಂಎವೈ–ಜಿ)	ಹೌದು	ಸಾಮಾಜಿಕ ಲೆಕ್ಕಪರಿಶೋಧನೆಯ ಯೋಜನೆಯ ಮಾರ್ಗಸೂಚಿಗಳು	ಸಂಬಂಧಪಟ್ಟ ಇಲಾಖೆಯ ಬೇಡಿಕೆಗೆ ಅನುಗುಣವಾಗಿ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದು.	5,679 ಗ್ರಾಮ ಪಂಚಾಯಿತಿಗಳು	ನಡೆಸಲಾಗಿಲ್ಲ
4	ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ (ಎನ್.ಎಸ್.ಎ.ಪಿ.)	ಇಲ್ಲ	ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 6.10	ವರ್ಷಕ್ಕೆ ಒಮ್ಮೆ	ಶೂನ್ಯ	ಶೂನ್ಯ
5	ಸಾರ್ವಜನಿಕ ವಿತರಣಾ ವ್ಯವಸ್ಥೆ	ಇಲ್ಲ	2013ರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಸೆಕ್ಷನ್ 28	ವರ್ಷಕ್ಕೆ ಒಮ್ಮೆ	ಶೂನ್ಯ	ಶೂನ್ಯ
6	ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್.ಆರ್.ಎಲ್.ಎಂ.)	ಇಲ್ಲ	ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 5.1	ವರ್ಷಕ್ಕೆ ಒಮ್ಮೆ	ಶೂನ್ಯ	ಶೂನ್ಯ
7	ಬಿಸಿಯೂಟ ಯೋಜನೆ	ಹೌದು	ಶಿಕ್ಷಣ ಇಲಾಖೆಯ ವಿನಂತಿಯ ಮೇರೆಗೆ	ವರ್ಷಕ್ಕೆ ಒಮ್ಮೆ	ಶೂನ್ಯ	93 ಶಾಲೆಗಳು
8	ಸ್ವಚ್ಛ ಭಾರತ ಮಿಷನ್	ಇಲ್ಲ	ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 5.2.10	ವರ್ಷಕ್ಕೆ ಒಮ್ಮೆ	ಶೂನ್ಯ	ಶೂನ್ಯ

ಆಧಾರ: ಸಾಮಾಜಿಕ ಲೆಕ್ಕಪರಿಶೋಧನೆಯ ನಿರ್ದೇಶಕರು ನೀಡಿದ ಮಾಹಿತಿ.

ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯವು ಒದಗಿಸಿದ ಮಾಹಿತಿಯ ಪ್ರಕಾರ, ಎಂಟು ಯೋಜನೆಗಳಿಗೆ, ಯೋಜನೆಯ ಮಾರ್ಗಸೂಚಿಗಳಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕಲ್ಪಿಸಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯವನ್ನು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆದ ಸಾಮಾಜಿಕ ಲೆಕ್ಕಪರಿಶೋಧನೆಯ ಉದ್ದೇಶಗಳೊಂದಿಗೆ ಸೊಸೈಟಿಯಾಗಿ (ಕರ್ನಾಟಕ ರಾಜ್ಯ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ

ಉದ್ಯೋಗ ಖಾತರಿ ಕಾಯ್ದೆದ ಸಾಮಾಜಿಕ ಲೆಕ್ಕಪರಿಶೋಧನಾ ಸೊಸೈಟಿ) ರಚಿಸಲಾಯಿತು. 15ನೇ ಹಣಕಾಸು ಆಯೋಗದ ಯೋಜನೆಯ ಮಾರ್ಗಸೂಚಿಗಳು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆದ ಯೋಜನಾ ನಿಯಮಗಳ ಲೆಕ್ಕಪರಿಶೋಧನೆ 2011ರ ಅಡಿಯಲ್ಲಿ ಸ್ಥಾಪಿಸಲಾದ ಸಾಮಾಜಿಕ ಲೆಕ್ಕಪರಿಶೋಧನಾ ಘಟಕವೂ ಸಹ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ನೆರವು ನೀಡಬೇಕು. ಸಾಮಾಜಿಕ ಲೆಕ್ಕಪರಿಶೋಧನೆ ನಿರ್ದೇಶನಾಲಯವು ಈ ಎರಡು ಯೋಜನೆಗಳಿಗೆ (ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಮತ್ತು 14ನೇ/15ನೇ ಹಣಕಾಸು ಆಯೋಗದ ಯೋಜನೆಗಳು) ಸಂಬಂಧಿಸಿದಂತೆ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಿತು.

2020–21ರ ಸಾಲಿಗೆ (ಮೊದಲ ಸುತ್ತಿನ) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆದ ವ್ಯಾಪ್ತಿಗೆ ಸಂಬಂಧಿಸಿದಂತೆ, 50 ಪ್ರತಿಶತಕ್ಕಿಂತ ಕಡಿಮೆಯಾಗಿತ್ತು (3,055 ಗ್ರಾಮ ಪಂಚಾಯಿತಿಗಳು) 14ನೇ/15ನೇ ಹಣಕಾಸು ಆಯೋಗ ಯೋಜನೆಗೆ ಸಂಬಂಧಿಸಿದಂತೆ ಸಾಮಾಜಿಕ ಲೆಕ್ಕಪರಿಶೋಧನೆಯ ಕೊರತೆಯಿತ್ತು. ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಸಂಬಂಧಿಸಿದಂತೆ, ಇಲಾಖೆಯ ಕೋರಿಕೆಯ ಮೇರೆಗೆ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು. 2020–21 ಮತ್ತು 2021–22 ಸಮಯದಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ (ಎನ್.ಎಸ್.ಎ.ಪಿ.), ಸಾರ್ವಜನಿಕ ವಿತರಣಾ ವ್ಯವಸ್ಥೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಸ್ವಚ್ಛ ಭಾರತ ಮಿಷನ್ ಅಂತಹ ಇತರ ಯೋಜನೆಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಲಾಗಲಿಲ್ಲ.

ಗ್ರಾಮೀಣಾಭಿವೃದ್ಧಿ ಸಚಿವಾಲಯದ ನಿಧಿಯ ಬಿಡುಗಡೆಯಲ್ಲಿನ ವಿಳಂಬ, ಕೋವಿಡ್ ಸಾಂಕ್ರಾಮಿಕ ಮತ್ತು ಕೆಲವು ಗ್ರಾಮ ಪಂಚಾಯಿತಿಗಳು ದಾಖಲೆಗಳನ್ನು ಸಲ್ಲಿಸದ ಕಾರಣ, ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆ ಇತ್ತು ಎಂದು ನಿರ್ದೇಶನಾಲಯವು ಹೇಳಿತು (ಫೆಬ್ರವರಿ 2023).

1..10.3 ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ಲೋಕಾಯುಕ್ತ

ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 286ರನುಸಾರ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯ ಪ್ರತಿಯೊಬ್ಬ ಸದಸ್ಯರು ಮತ್ತು ಅವರ ಅಧೀನದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರನ್ನು ಚಾಲ್ತಿಯಲ್ಲಿರುವ ಭಾರತೀಯ ದಂಡ ಸಂಹಿತೆ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ, 1988ರ ಪರಿಚ್ಛೇಧ 21ರ ಅರ್ಥದಲ್ಲಿ ಸಾರ್ವಜನಿಕ ಸೇವಕರೆಂದು ಪರಿಗಣಿಸಲಾಗುತ್ತದೆ. ಇದಲ್ಲದೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 (1985ರ ಕಾಯ್ದೆ ಸಂಖ್ಯೆ 4) ಪ್ರಕಾರ, ಸಾರ್ವಜನಿಕ ಸೇವಕರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಮನದಟ್ಟಾದರೆ ಮತ್ತು ಆತನು ಹೊಂದಿದ್ದ ಹುದ್ದೆಯನ್ನು ಘೋಷಣೆ ಮಾಡಿದಲ್ಲಿ ಮತ್ತು ಸಾರ್ವಜನಿಕ ಸೇವಕನು ಯಾವುದೇ ಕ್ರಿಮಿನಲ್ ಅಪರಾಧವನ್ನು ಮಾಡಿದ್ದಾನೆ ಎಂಬ ಘೋಷಣೆಯನ್ನು ಸಕ್ಷಮ ಪ್ರಾಧಿಕಾರವು ಒಪ್ಪಿಕೊಂಡಿದ್ದರೆ, ಬೇರೆ ಯಾವುದೇ ಪ್ರಾಧಿಕಾರವನ್ನು ಉಲ್ಲೇಖಿಸದೆ ಕಾನೂನು ಕ್ರಮವನ್ನು ಪ್ರಾರಂಭಿಸಬಹುದು.

ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳ ವಿರುದ್ಧದ ದೂರುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವ ಪ್ರತ್ಯೇಕ ಕೋಶವಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೇಳಿದೆ (ಫೆಬ್ರವರಿ 2023). ಇದಲ್ಲದೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ದಾಖಲಾದ ಒಟ್ಟು ಪ್ರಕರಣಗಳ ಸಂಖ್ಯೆ 1,917 ಆಗಿದ್ದು, ಅವುಗಳಲ್ಲಿ 1,271 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಲಾಯಿತು.

ರಾಜ್ಯ ಸರ್ಕಾರವು (ಏಪ್ರಿಲ್ 2024) ವಾಸ್ತವಾಂಶ ಮತ್ತು ಅಂಕಿಅಂಶಗಳನ್ನು ದೃಢಪಡಿಸಿತು.

ಬಿ. ಆರ್ಥಿಕ ಚಿತ್ರಣ ಮತ್ತು ವರದಿ ಮಾಡುವಿಕೆ

1.11 ವರದಿ ಮಾಡುವ ಚೌಕಟ್ಟು

ಪಂಚಾಯತ್ ರಾಜ್ ಸಂಸ್ಥೆಗಳ ಹಣಕಾಸು/ಲೆಕ್ಕಪತ್ರ ವಿಭಾಗದ ಕಾರ್ಯಚಟುವಟಿಕೆ

- ಕರ್ನಾಟಕ ಜಿಲ್ಲಾ ಪಂಚಾಯಿತಿ (ಎಫ್ ಮತ್ತು ಎ) ನಿಯಮಗಳು, 1996ರ ಪರಿಚ್ಛೇಧ 30(1) ರಂತೆ ಮುಖ್ಯ ಲೆಕ್ಕಾಧಿಕಾರಿಗಳು (ಸಿಎಒ) ಜಿಲ್ಲಾ ಪಂಚಾಯಿತಿಯ ಹಣಕಾಸು ವಿಭಾಗದ ಮುಖ್ಯಸ್ಥರಾಗಿರುತ್ತಾರೆ ಎಂದು ವಿಧಿಸುತ್ತದೆ. ಅವರು ನೇರವಾಗಿ ಸಿಇಒ ಅಧೀನದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಈ ನಿಯಮಗಳ ಅಡಿಯಲ್ಲಿ ನಿಯೋಜಿಸಲಾದ ಕಾರ್ಯವನ್ನು ನಿರ್ವಹಿಸಲು ಅಗತ್ಯವಾದ ಲೆಕ್ಕಪತ್ರ ಅಧಿಕಾರಿಗಳು, ಲೆಕ್ಕಪತ್ರ ಮೇಲ್ವಿಚಾರಕರು ಮತ್ತು ಇತರ ಸಿಬ್ಬಂದಿಗಳ ಸಹಾಯವನ್ನು ಹೊಂದಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಹಣಕಾಸು, ಬಜೆಟ್ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಕೆಲಸದ ಒಟ್ಟಾರೆ ಉಸ್ತುವಾರಿಯನ್ನು ಸಿಎಒ ವಹಿಸಿಕೊಳ್ಳುತ್ತಾರೆ ಎಂದು ಪರಿಚ್ಛೇಧ 30 (2) ಒತ್ತಿ ಹೇಳುತ್ತದೆ.
- ಕರ್ನಾಟಕ ತಾಲ್ಲೂಕು ಪಂಚಾಯಿತಿ (ಎಫ್ ಮತ್ತು ಎ) ನಿಯಮಗಳು, 1996ರ ಪರಿಚ್ಛೇಧ 25 (1) ಪ್ರಕಾರ, ಕಾರ್ಯನಿರ್ವಾಹಕ ಅಧಿಕಾರಿ (ಇಒ)ಯ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಕೆಲಸದ ಒಟ್ಟಾರೆ ಉಸ್ತುವಾರಿಯನ್ನು ಹೊಂದಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿ (ಇಒ)ಗೆ ಲೆಕ್ಕಪತ್ರಗಳ ಮೇಲ್ವಿಚಾರಕರು ಮತ್ತು ಲೆಕ್ಕಪತ್ರಗಳ ಸಹಾಯಕರು ಸಹಾಯ ಮಾಡುತ್ತಾರೆ.
- ಕರ್ನಾಟಕ ಪಂಚಾಯತ್ ರಾಜ್‌ಕಾಯ್ದೆ, 1993ರ ಪರಿಚ್ಛೇಧ 111ರ ಪ್ರಕಾರ, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರವು ನೇಮಿಸುವ ಒಬ್ಬ ಪೂರ್ಣಕಾಲಿಕ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ), ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಇರಬೇಕು. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಪಿಡಿಒಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸಹಾಯ ಮಾಡುತ್ತಾರೆ.

ಕರ್ನಾಟಕ ಪಂಚಾಯತ್ ರಾಜ್ ಗ್ರಾಮ ಪಂಚಾಯತ್ (ಬಜೆಟಿಂಗ್ ಮತ್ತು ಲೆಕ್ಕಗಳ) ನಿಯಮಗಳು, 2006ರ ನಿಬಂಧನೆಗಳ ಪ್ರಕಾರ, ಬಜೆಟ್ ಅಂದಾಜುಗಳು, ಮಾಸಿಕ ಖಾತೆಗಳು, ಅರ್ಧವಾರ್ಷಿಕ ಲೆಕ್ಕ, ಟ್ರಯಲ್ ಬ್ಯಾಲೆನ್ಸ್ ಗಳು, ಹಣದ ಸೆಳೆಯುವಿಕೆ ಮತ್ತು ವೆಚ್ಚಕ್ಕೆ ಸಂಬಂಧಿಸಿದ ವಿಷಯಗಳು, ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕಪತ್ರಗಳ ಸಲ್ಲಿಕೆಗೆ ಕಾರ್ಯದರ್ಶಿಯು ಜವಾಬ್ದಾರನಾಗಿರುತ್ತಾರೆ.

ಪಿಡಿಒ ಮಾಸಿಕ ಲೆಕ್ಕಪತ್ರಗಳನ್ನು ಸಲ್ಲಿಸಬೇಕು, ವರದಿಗಳು, ಲೆಕ್ಕಪತ್ರಗಳ ತಃಖ್ತೆ ಮತ್ತು ಅಂತಹ ಇತರ ಮಾಹಿತಿಯನ್ನು ಜಿಲ್ಲಾ ಪಂಚಾಯಿತಿ, ಸರ್ಕಾರ ಅಥವಾ ಲೆಕ್ಕಪರಿಶೋಧಕರು ಕೇಳಿದಾಗ ಒದಗಿಸಬೇಕು.

1.11.1 15ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯು ಬಿಡುಗಡೆ ಮಾಡಿದ ಮತ್ತು ಜಿಲ್ಲಾ ಪಂಚಾಯಿತಿ ಸ್ವೀಕರಿಸಿದ ಮೊತ್ತದ ವ್ಯತ್ಯಾಸ

15ನೇ ಸಿ.ಎಫ್.ಸಿಯ ಅಡಿ, 2020–21 ಮತ್ತು 2021–22ರ ಅವಧಿಯಲ್ಲಿ, ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯು (ಆರ್.ಡಿ.ಪಿ.ಆರ್) ಪ್ರತಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಿದ ಹಣ ಮತ್ತು ಅವುಗಳ ಲೆಕ್ಕಪತ್ರಗಳಲ್ಲಿ ಅನುಕ್ರಮವಾಗಿ 30 ಮತ್ತು 18 ಜಿಲ್ಲಾ ಪಂಚಾಯಿತಿಗಳಲ್ಲಿ ವ್ಯತ್ಯಾಸವನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳನ್ನು **ಅನುಬಂಧ–1.9 ಮತ್ತು ಅನುಬಂಧ–1.10** ರಲ್ಲಿ ನೀಡಲಾಗಿದೆ. 2020–21ರ ಅವಧಿಯಲ್ಲಿ 25 ಜಿಲ್ಲಾ ಪಂಚಾಯಿತಿಗಳು ₹ 34.31 ಕೋಟಿಯಷ್ಟು ಕಡಿಮೆ ಲೆಕ್ಕ ಮಾಡಿದ್ದು, ಐದು[4] ಜಿಲ್ಲಾ ಪಂಚಾಯಿತಿಗಳು ₹ 23.58 ಕೋಟಿಯಷ್ಟು ಸ್ವೀಕೃತಿಗಳ ಲೆಕ್ಕ

[4] ಚಾಮರಾಜನಗರ, ಚಿಕ್ಕಮಗಳೂರು, ಉತ್ತರ ಕನ್ನಡ, ವಿಜಯಪುರ ಮತ್ತು ಯಾದಗಿರಿ

ಹಾಕಿರಲಿಲ್ಲ ಮತ್ತು 2021–22 ಅವಧಿಯಲ್ಲಿ, 18 ಜಿಲ್ಲಾ ಪಂಚಾಯಿತಿಗಳು ₹ 1.93 ಕೋಟಿಯಷ್ಟು ಹೆಚ್ಚುವರಿ ಸ್ವೀಕೃತಿಗಳನ್ನು ಲೆಕ್ಕ ಹಾಕಿದ್ದವು.

ಕೇಂದ್ರ ಸರ್ಕಾರದ ಹಂಚಿಕೆಯ ಪ್ರಕಾರ ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ (ಜೂನ್ 2024). ಈ ಉತ್ತರವು ಸ್ವೀಕರಿಸಿದ ಮೊತ್ತದಲ್ಲಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿಲ್ಲದ ಕಾರಣ ಸಮರ್ಥನೀಯವಲ್ಲ.

1.11.2 ಅನಿಯತ ನಿಧಿಗಳ ಹಿಡಿದಿಟ್ಟುಕೊಳ್ಳುವಿಕೆ (10ರಿಂದ 14ನೇ ಎಫ್. ಸಿ.) ಆರ್ ಡಿ ಪಿ ಆರ್ ಸೂಚನೆಗಳನ್ನು ಪಾಲಿಸದಿರುವುದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಎಲ್ಲಾ ಜಿಲ್ಲಾ ಪಂಚಾಯಿತಿ/ತಾಲ್ಲೂಕು ಪಂಚಾಯಿತಿಗಳಿಗೆ ಪೂರ್ಣಗೊಂಡ ಮತ್ತು ಕಾರ್ಯನಿರ್ವಹಿಸದ ಯೋಜನೆಯ ಖಾತೆಗಳಿಗೆ ಸಂಬಂಧಿಸಿದ ಬಡ್ಡಿ ಸೇರಿದಂತೆ ಉಳಿಕೆ ಮೊತ್ತವನ್ನು 0515–00–800–0–03 ಇತರ ಸ್ವೀಕೃತಿಗಳು ಎಂಬ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ಸೂಚನೆಗಳನ್ನು ನೀಡಿತು. (ಆಗಸ್ಟ್ 2016)

ಆದಾಗ್ಯೂ, 2021–22 ನೇ ಸಾಲಿನ ವಾರ್ಷಿಕ ಲೆಕ್ಕಗಳಿಗೆ ಅನುಬಂಧಿಸಿದ ಬ್ಯಾಂಕ್ ಖಾತೆಗಳ ಪರಿಶೀಲನೆಯು ಹಿಂದಿನ ಹಣಕಾಸು ಆಯೋಗಗಳಿಗೆ (10 ರಿಂದ 14 ನೇ ತರಗತಿ) ಸಂಬಂಧಿಸಿದ ಹಣವನ್ನು ಸರ್ಕಾರಿ ಖಾತೆಗೆ ಜಮಾ ಮಾಡದೆ ₹ 29.35 ಕೋಟಿಗಳಷ್ಟು ಜಿಲ್ಲಾ ಪಂಚಾಯತ್‌ಗಳು/ತಾಂತ್ರಿಕ ಮಂಡಳಿಗಳ ವಾರ್ಷಿಕ ಲೆಕ್ಕಪತ್ರಗಳಲ್ಲಿಯೇ ಬಿಂಬಿಸಲಾಗಿದೆ ಎಂದು ತೋರಿಸಿದೆ. ವಿವರಗಳನ್ನು **ಅನುಬಂಧ–11 ಮತ್ತು ಅನುಬಂಧ–12**ರಲ್ಲಿ ನೀಡಲಾಗಿದೆ.

14ನೇ ಹಣಕಾಸು ಆಯೋಗದ ನೆರವು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕಾಗಿದ್ದರೂ, ಬೆಂಗಳೂರು ನಗರ (₹3.58 ಕೋಟಿ) ಮತ್ತು ಶಿವಮೊಗ್ಗ (₹10.35 ಲಕ್ಷ) ಎಂಬ ಎರಡು ಜಿಲ್ಲಾ ಪಂಚಾಯಿತಿಗಳು 14ನೇ ಹಣಕಾಸು ಶಿಲ್ಕುಗಳನ್ನು ಅನಿಯತವಾಗಿ ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಬಾಕಿ ತೋರಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಹೀಗೆ ಹಣ ಜಮೆ ಮಾಡದ ಕಾರಣ ಜಿಲ್ಲಾ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳ ವಾರ್ಷಿಕ ಖಾತೆಗಳಲ್ಲಿ ₹ 29.35 ಕೋಟಿ ಮೊತ್ತದ ಹಣ ಬ್ಲಾಕ್ ಆಗುವುದು/ಸಂಗ್ರಹಣೆಯಾಗುವುದು ಕಂಡುಬಂದಿದೆ.

ರಾಜ್ಯ ಸರ್ಕಾರವು ಈ ಅಂಶವನ್ನು ಒಪ್ಪಿಕೊಂಡಿದ್ದರೂ (ಜೂನ್ 2024), ಆಯಾ ಜಿಲ್ಲಾ ಪಂಚಾಯಿತಿಗಳು/ತಾಲ್ಲೂಕು ಪಂಚಾಯಿತಿಗಳಿಂದ ಬಳಕೆಯಾಗದ ಹಣವನ್ನು ಪಡೆಯಲು ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

1.11.3 15ನೇ ಸಿ.ಎಫ್.ಸಿ ಅನುದಾನದಲ್ಲಿನ ಕೊರತೆ

ಆಡಿಟ್ ಗಮನಿಸಿದಂತೆ, 2021–22ನೇ ಹಣಕಾಸು ವರ್ಷದಲ್ಲಿ ರಾಜ್ಯ ಸರ್ಕಾರಕ್ಕೆ ಮೂಲ ಅನುದಾನ ಬಿಡುಗಡೆ ಮಾಡುವಲ್ಲಿ ₹ 1.5 ಕೋಟಿಗಳಷ್ಟು ಕೊರತೆಯಿದ್ದುದು ಕಂಡುಬಂದಿತು, ಇದನ್ನು **ಕೋಷ್ಟಕ–1.9**ರಲ್ಲಿ ವಿವರಿಸಿದೆ.

ಕೋಷ್ಟಕ–1.9: 15ನೇ ಹಣಕಾಸು ಆಯೋಗದ ಅನುದಾನಗಳ ಹಂಚಿಕೆ ಮತ್ತು ಬಿಡುಗಡೆ

(₹ ಕೋಟಿಗಳಲ್ಲಿ)

ವರ್ಷ	ಹಂಚಿಕೆ			ಬಿಡುಗಡೆಗಳು			ಕೊರತೆ		
	ಮೂಲ ದರ	ನಿರ್ಬಂಧಿತ	ಒಟ್ಟು	ಮೂಲ ದರ	ನಿರ್ಬಂಧಿತ	ಒಟ್ಟು	ಮೂಲ ದರ	ನಿರ್ಬಂಧಿತ	ಒಟ್ಟು
2020-21	1608.5	1608.5	3217.0	1608.5	1608.5	3217.0	0.0	0.0	0.0
2021-22	950.8	1426.2	2377.0	949.3	1426.2	2375.5	1.5	0.0	1.5

ಆಧಾರ: ಭಾರತ ಸರ್ಕಾರದ ಕಾರ್ಯಾಚರಣೆಯ ಮಾರ್ಗಸೂಚಿಗಳು ಮತ್ತು ಬಿಡುಗಡೆ ಆದೇಶಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಹಿತಿ

ಕೇಂದ್ರ ಸರ್ಕಾರದಿಂದ ಹಂಚಿಕೆಯಾದ ಪ್ರಕಾರ ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ರಾಜ್ಯ ಸರ್ಕಾರವು ಹೇಳಿತು(ಜೂನ್ 2024). 2021–22 ನೇ ಸಾಲಿಗೆ ಭಾರತ ಸರ್ಕಾರವು ಪ್ರಮಾಣಾನುಗುಣ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಿದೆ, ಇದರ ಪರಿಣಾಮವಾಗಿ ರಾಜ್ಯ ಸರ್ಕಾರಕ್ಕೆ ₹ 1.5 ಕೋಟಿ ಕೊರತೆ ಉಂಟಾಗಿದೆ.

1.11.4 ಲೆಕ್ಕ ಪರಿಶೀಲನೆ ಆನ್‌ಲೈನ್

15ನೇ ಹಣಕಾಸು ಆಯೋಗದ ಕಾರ್ಯಾಚರಣಾ ಮಾರ್ಗಸೂಚಿಗಳ ಕಂಡಿಕೆ 8, ಅನುದಾನ ಬಿಡುಗಡೆಗೆ ಅರ್ಹರಾಗಲು ಪಂಚಾಯತ್ ರಾಜ್ ಸಂಸ್ಥೆಗಳು 'ಆಡಿಟ್–ಆನ್‌ಲೈನ್ ಅರ್ಜಿ'ಯಲ್ಲಿ ತಮ್ಮ ಆಡಿಟ್ ಮಾಡಿದ ಲೆಕ್ಕಪತ್ರಗಳನ್ನು ಕಡ್ಡಾಯವಾಗಿ ಸಿದ್ಧಪಡಿಸಬೇಕು ಮತ್ತು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಬೇಕು ಎಂದು ವಿಧಿಸಿತು (ಜುಲೈ 2021).

ಕೆಎಸ್‌ಎಡಿಯಿಂದ ಆಡಿಟ್ ಆನ್‌ಲೈನ್ ಅನ್ನು ಕಾರ್ಯಗತಗೊಳಿಸಲಾಗಿದೆ ಮತ್ತು ನಡೆಸಲಾಗಿದೆ ಮತ್ತು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಆನ್‌ಲೈನ್ ಆಡಿಟ್ ಪೂರ್ಣಗೊಂಡಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2024). ಜಿಲ್ಲಾ ಪಂಚಾಯಿತಿ/ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ, ಘಟಕಗಳು ಮತ್ತು ಸಿಬ್ಬಂದಿಗಳ ಮ್ಯಾಪಿಂಗ್ ಪ್ರಗತಿಯಲ್ಲಿದೆ.

1.12 ಲೆಕ್ಕಪರಿಶೋಧನೆಯ ವ್ಯವಸ್ಥೆಗಳು

1.12.1 ಪಂಚಾಯತ್ ರಾಜ್ ಸಂಸ್ಥೆಗಳ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆ

ಆಂತರಿಕ ಲೆಕ್ಕಪರಿಶೋಧನೆಯು ಸಂಬಂಧಿತ ಕಾಯಿದೆಗಳು ಹಾಗೂ ಹಣಕಾಸು/ಲೆಕ್ಕಪತ್ರ ನಿಯಮಗಳಲ್ಲಿ ಕಲ್ಪಿಸಲಾಗಿರುವ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಪಾಲನೆಯ ಮಟ್ಟವನ್ನು ಪರೀಕ್ಷಿಸಲು ಮತ್ತು ಮೌಲ್ಯಮಾಪನ ಮಾಡಲು ಒಂದು ಪ್ರಮುಖ ಸಾಧನವಾಗಿದೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅಪಾಯ ನಿರ್ವಹಣೆ ಮತ್ತು ಆಂತರಿಕ ನಿಯಂತ್ರಣ ಚೌಕಟ್ಟಿನ ಸಮರ್ಪಕತೆಯ ಬಗ್ಗೆ ಆಡಳಿತ ನಿರ್ವಹಿಸುವವರಿಗೆ ಭರವಸೆ ನೀಡುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರವು ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಹೊಂದಿರಲಿಲ್ಲ.

ಜಿಲ್ಲೆಗಳಲ್ಲಿನ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಆಯಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಲೆಕ್ಕಪತ್ರ ಅಧಿಕಾರಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ರಾಜ್ಯ ಸರ್ಕಾರ (ಏಪ್ರಿಲ್ 2024) ತಿಳಿಸಿದೆ. ಸಿಬ್ಬಂದಿ ಕೊರತೆಯಿಂದಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ರೂಪಿಸಲು ಸಾಕಷ್ಟು ಅನುಕೂಲಕರವಾಗಿರಲಿಲ್ಲ.

1.12.2 ಬಾಹ್ಯ ಲೆಕ್ಕಪರಿಶೋಧನೆ

1.12.2.1 ಕೆಎಸ್‌ಎಎಡಿಯಿಂದ ಲೆಕ್ಕಪರಿಶೋಧನೆ

ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 246ರ ಪ್ರಕಾರ, ಕೆಎಸ್‌ಎಎಡಿಯ ಪ್ರಧಾನ ನಿರ್ದೇಶಕರು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಏಕೀಕೃತ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅಂತಹ ವರದಿಯನ್ನು ರಾಜ್ಯ ಶಾಸಕಾಂಗದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು. ವರ್ಷ 2021–22 ವರೆಗಿನ ಗ್ರಾಮ ಪಂಚಾಯಿತಿಗಳ ಏಕೀಕೃತ ವಾರ್ಷಿಕ ವರದಿಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಲಾಗಿತ್ತು.

1.12.2.2 ಹಣಕಾಸು ಲೆಕ್ಕಗಳ ಪ್ರಮಾಣೀಕರಣ

ಕೆಪಿಆರ್ ಕಾಯ್ದೆ, 1993ರ ಪರಿಚ್ಛೇಧ 246ರ ಪ್ರಕಾರ, ಪ್ರತಿ ಜಿಲ್ಲಾ ಪಂಚಾಯಿತಿಯ ಲೆಕ್ಕಪತ್ರಗಳನ್ನು ಪ್ರತಿ ವರ್ಷ ಪ್ರಧಾನ ನಿರ್ದೇಶಕರು, ಕೆಎಸ್‌ಎಎಡಿಯಿಂದ ಅಧಿಕೃತಗೊಳಿಸಬಹುದಾದಂತಹ ಅಧಿಕಾರಿಗಳಿಂದ ಲೆಕ್ಕಪರಿಶೋಧನೆ ಮಾಡಬೇಕಾಗುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಗ್ರಾಮ ಪಂಚಾಯಿತಿ (ಬಜೆಟ್ ಮತ್ತು ಅಕೌಂಟಿಂಗ್) ನಿಯಮಗಳು 2006 ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿಗದಿಪಡಿಸುತ್ತದೆ. ನಿಗದಿತ ಕಾರ್ಯವಿಧಾನದ ಪ್ರಕಾರ, ಅನುಮೋದಿತ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗಾಗಿ ಜಿಲ್ಲಾ ಪಂಚಾಯಿತಿಯ ಸಿಎಒ ಮತ್ತು ಸಂಬಂಧಿತ ಸ್ಥಳೀಯ ಲೆಕ್ಕಪರಿಶೋಧನಾ ವೃತ್ತದ ಸಹಾಯಕ ನಿಯಂತ್ರಕರಿಗೆ ಕಳುಹಿಸಲಾಗುತ್ತದೆ. ಲೆಕ್ಕಪರಿಶೋಧನೆ ಪೂರ್ಣಗೊಂಡ ನಂತರ, ಸ್ಥಳೀಯ ಲೆಕ್ಕಪರಿಶೋಧನಾ ವೃತ್ತದ ಸಹಾಯಕ ನಿಯಂತ್ರಕರು ಲೆಕ್ಕಪರಿಶೋಧನೆ ಪೂರ್ಣಗೊಂಡ ಒಂದು ತಿಂಗಳೊಳಗೆ ಪ್ರಧಾನ ನಿರ್ದೇಶಕರು, ಕೆಎಸ್‌ಎಎಡಿಯ ಪರವಾಗಿ ಲೆಕ್ಕಪರಿಶೋಧನಾ ವರದಿಯನ್ನು ಗ್ರಾಮ ಪಂಚಾಯಿತಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೆ ನೀಡತಕ್ಕದ್ದು ಮತ್ತು ಲೆಕ್ಕಪರಿಶೋಧನಾ ವರದಿಯು ವಾರ್ಷಿಕ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ವೆಚ್ಚದ ಲೆಕ್ಕಗಳು ಮತ್ತು ಗ್ರಾಮ ಪಂಚಾಯಿತಿಯ ಬ್ಯಾಲೆನ್ಸ್ ಶೀಟ್ ಪ್ರಮಾಣೀಕೃತ ತಃಖ್ತೆಯನ್ನು ಒಳಗೊಂಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ನಿಗದಿತ ಅವಧಿಯೊಳಗೆ ಲೆಕ್ಕಪರಿಶೋಧನಾ ಪ್ರಾಧಿಕಾರಕ್ಕೆ ನಿಧಿಗಳ ಒದಗಿಸಲು ವಿಫಲವಾದ ಅಂತಹ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಸರ್ಕಾರವು ನಿಧಿಗಳ ಬಿಡುಗಡೆಯನ್ನು ತಡೆಹಿಡಿಯಬಹುದಾದ್ದರಿಂದ ಲೆಕ್ಕಪರಿಶೋಧನೆಯು ಮುಖ್ಯವಾಗಿದೆ.

ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ 2022ರ ಮಾರ್ಚ್ ವೇಳೆಗೆ ಕೆಎಸ್‌ಎಎಡಿಯು ನಡೆಸಿದ ಲೆಕ್ಕಪರಿಶೋಧನೆಯ ಸ್ಥಿತಿಯನ್ನು **ಕೋಷ್ಟಕ–1.10**ರಲ್ಲಿ ತೋರಿಸಲಾಗಿದೆ.

ಕೋಷ್ಟಕ–1.10: ಮಾರ್ಚ್ 2022 ರ ಹೊತ್ತಿಗೆ ಕೆಎಸ್‌ಎಎಡಿಯಿಂದ ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನೆಯ ಸ್ಥಿತಿ

ವರ್ಷ	ಜಿಲ್ಲಾ ಪಂಚಾಯಿತಿಗಳ ಸಂಖ್ಯೆ	ಲೆಕ್ಕಪರಿಶೋಧನೆ ಮಾಡಲಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ
2017–18	6,022	5,939
2018–19	6,024	5,799
2019–20	6,035	5,493
2020–21	6,021	5,613
2021–22	6,005	5,938

ಆಧಾರ: ಕೆಎಸ್‌ಎಎಡಿ ಒದಗಿಸಿದ ಮಾಹಿತಿ

ಮಾರ್ಚ್ 2022 ರ ಹೊತ್ತಿಗೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ದಾಖಲೆಗಳನ್ನು ಒದಗಿಸದ ಕಾರಣ ಅಥವಾ ಮಾನವ ಸಂಪನ್ಮೂಲದ ಕೊರತೆಯಿಂದಾಗಿ 42 ಗ್ರಾಮ ಪಂಚಾಯಿತಿ ಲೆಕ್ಕಗಳನ್ನು ಐದರಿಂದ 23 ವರ್ಷಗಳ ಕಾಲ ಲೆಕ್ಕಪರಿಶೋಧನೆ ಮಾಡಲಾಗಿಲ್ಲ ಎಂದು ಕೆಎಸ್‌ಎಎಡಿಯು ತಿಳಿಸಿತು (ಮಾರ್ಚ್ 2023). ವಿವರಗಳನ್ನು **ಅನುಬಂಧ–1.13**ರಲ್ಲಿ ನೀಡಲಾಗಿದೆ.

ರಾಜ್ಯ ಸರ್ಕಾರವು (ಏಪ್ರಿಲ್ 2024) ಗ್ರಾಮ ಪಂಚಾಯಿತಿ ಲೆಕ್ಕಗಳನ್ನು ಲೆಕ್ಕಪರಿಶೋಧಿಸುವಲ್ಲಿನ ಕೊರತೆಯನ್ನು ಒಪ್ಪಿಕೊಂಡಿದೆ.

1.12.2.3 ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ

(ಎ) ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಸ್ಥಳೀಯ ಪರಿಶೀಲನಾ ವರದಿ (ಎಲ್.ಎ.ಆರ್) ನೀಡುವಲ್ಲಿ ವಿಳಂಬ

ಕೆಪಿಆರ್ ಕಾಯ್ದೆ, 1993ರ ಪರಚ್ಛೇಧ 246 (5), ಲೆಕ್ಕಪರಿಶೋಧನೆಯ ಕೊನೆಯ ದಿನಾಂಕದಿಂದ 30 ದಿನಗಳೊಳಗೆ ಗ್ರಾಮ ಪಂಚಾಯಿತಿಗಳಿಗೆ ಸ್ಥಳೀಯ ಪರಿಶೀಲನಾ ವರದಿಗಳನ್ನು ನೀಡಬೇಕು ಎಂದು ವಿಧಿಸುತ್ತದೆ. ಸ್ಥಳೀಯ ಪರಿಶೀಲನಾ ವರದಿ (ಎಲ್.ಎ.ಆರ್)ಗಳ ಸಾಮಾನ್ಯ ಪರಿಶೀಲನೆಯ ಪ್ರಕಾರ, ಪರೀಕ್ಷಾ ಲೆಕ್ಕಪರಿಶೋಧನೆ ನಡೆಸಿರುವ 45 ಗ್ರಾಮ ಪಂಚಾಯಿತಿಗಳ ಪೈಕಿ 33ರಲ್ಲಿ, ಸ್ಥಳೀಯ ಪರಿಶೀಲನಾ ವರದಿಗಳ ವಿತರಣೆಯಲ್ಲಿ ಮೂರು ದಿನಗಳಿಂದ 209 ದಿನಗಳವರೆಗಿನ ವಿಳಂಬವಾಗಿದೆ.

(ಬಿ) ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸದಿರುವುದು

ಪರೀಕ್ಷಿಸಿದ 45 ಗ್ರಾಮ ಪಂಚಾಯಿತಿಗಳ ಪೈಕಿ 12[5] ಗ್ರಾಮ ಪಂಚಾಯಿತಿಗಳು ಕೆಪಿಆರ್ ಕಾಯ್ದೆ, 1993ರ ಪರಚ್ಛೇಧ 309ರ ಅಡಿಯಲ್ಲಿ ಅಗತ್ಯವಿರುವಂತೆ ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲಿಲ್ಲ.

(ಸಿ) ದಾಸ್ತಾನು ಮತ್ತು ಉಗ್ರಾಣಗಳ ಭೌತಿಕ ಪರಿಶೀಲನೆಯನ್ನು ನಡೆಸದಿರುವುದು

ಪರೀಕ್ಷಾ ತನಿಖೆ ನಡೆಸಿದ ಯಾವುದೇ 45 ಗ್ರಾಮ ಪಂಚಾಯಿತಿಗಳಲ್ಲಿ ದಾಸ್ತಾನು ಮತ್ತು ಉಗ್ರಾಣಗಳ ವಾರ್ಷಿಕವಾಗಿ ಭೌತಿಕ ಪರಿಶೀಲನೆಯನ್ನು ನಡೆಸಿರಲಿಲ್ಲ.

(ಡಿ) ಲೆಕ್ಕಪತ್ರಗಳ ಪ್ರಮಾಣೀಕರಣ ಮತ್ತು ಅನುಪಾಲನಾ ಲೆಕ್ಕಪರಿಶೋಧನೆಯ ಸ್ಥಿತಿ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 1971ರ ಡಿಪಿಸಿ ಕಾಯ್ದೆಯ ಪರಿಚ್ಛೇಧ 19 (3)ರ ಅಡಿಯಲ್ಲಿ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಲೆಕ್ಕಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸುತ್ತಾರೆ ಮತ್ತು ಪ್ರಮಾಣೀಕರಿಸುತ್ತಾರೆ. 2020–21 ಅವಧಿಯ ಲೆಕ್ಕಗಳ ಪ್ರಮಾಣೀಕರಣ ಮತ್ತು ಅನುಪಾಲನಾ ಲೆಕ್ಕಪರಿಶೋಧನೆಯ ಸ್ಥಿತಿಯನ್ನು ಕೆಳಗಿನ **ಕೋಷ್ಟಕ–11**ರಲ್ಲಿ ಸೂಚಿಸಲಾಗಿದೆ.

ಕೋಷ್ಟಕ–1.11: ಮಾರ್ಚ್ 2022ರಂತೆ ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕಪರಿಶೋಧನೆಯ ಸ್ಥಿತಿ

	ಜಿಲ್ಲಾ ಪಂಚಾಯಿತಿ	ತಾಲ್ಲೂಕು ಪಂಚಾಯಿತಿ	ಗ್ರಾಮ ಪಂಚಾಯಿತಿ
ಲೆಕ್ಕಪತ್ರಗಳ ಪ್ರಮಾಣೀಕರಣ	30	154	–
ಅನುಪಾಲನಾ ಲೆಕ್ಕಪರಿಶೋಧನೆ	09	23	71

ಆಧಾರ: ಈ ಕಚೇರಿಯಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ

[5] ಗ್ರಾಮ ಪಂಚಾಯಿತಿಗಳಾದ ಅರಣೆ, ಬನ್ನಿಕುಪ್ಪೆ, ಬೆಳೂರು, ದೇವಲಾಪುರ, ಕೆರೆಗೋಡು, ಕೊಡತಿ, ಕುದೂರು, ಮಂಚನಾಯಕನಹಳ್ಳಿ, ಮಂಡ್ಯ ಗ್ರಾಮನಾಥರ, ಮಂಗಲ, ಮಾಯಗಾನಹಳ್ಳಿ, ಉಮ್ಮಡಹಳ್ಳಿ

(ಇ) ಲೆಕ್ಕಪರಿಶೋಧನೆಗೆ ಸ್ಪಂದನೆ

ಕರ್ನಾಟಕ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಯೋಜನೆ (ಎಫ್ ಮತ್ತು ಎ) ನಿಯಮಗಳು, 1996ರ ನಿಯಮ 63ರ ಪ್ರಕಾರ, ಇಲಾಖೆಗಳ ಮುಖ್ಯಸ್ಥರು/ ಜಿಲ್ಲಾ ಪಂಚಾಯಿತಿಗಳ ಹಣ ಸೆಳೆಯುವ ಮತ್ತು ವಿತರಣಾ ಅಧಿಕಾರಿಗಳು ಮಹಾಲೇಖಪಾಲರು ಹೊರಡಿಸುವ ಆಕ್ಷೇಪಣೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಲೆಕ್ಕಪರಿಶೋಧನೆಯ ಆಕ್ಷೇಪಣೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಅಂತಿಮ ಜವಾಬ್ದಾರಿಯು ಜಿಲ್ಲಾ ಪಂಚಾಯಿತಿಗಳ ಸಿಇಒರವರ ಮೇಲಿದೆ ಎಂದು ವಿಧಿಸುತ್ತದೆ. ಮಾರ್ಚ್ 2022ರ ಹೊತ್ತಿಗೆ, 10,944 ಕಂಡಿಕೆ ಒಳಗೊಂಡ 1,468 ಪರಿಶೀಲನಾ ವರದಿಗಳು (ಐಆರ್‌ಗಳು) ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಬಾಕಿ ಉಳಿದಿವೆ. ವಿವರಗಳನ್ನು **ಕೋಷ್ಟಕ–1.12**ರಲ್ಲಿ ನೀಡಲಾಗಿದೆ.

ಕೋಷ್ಟಕ–1.12: 2021–22ರ ಲೆಕ್ಕಪರಿಶೋಧನೆಯ ಅವಧಿಯವರೆಗಿನ ಬಾಕಿ ಇರುವ ಪರಿಶೀಲನಾ ವರದಿಗಳುಗಳು ಮತ್ತು ಕಂಡಿಕೆಗಳ ವಿವರಗಳನ್ನು ತೋರಿಸುವ ಪಟ್ಟಿ

ಘಟಕಗಳು	10 ವರ್ಷಗಳಿಗಿಂತ ಹೆಚ್ಚು (2011–12 ವರೆಗೆ)		05 ರಿಂದ 10 ವರ್ಷಗಳು (2012–13 ನಿಂದ 2016–17)		03 ರಿಂದ 05 ವರ್ಷಗಳು (2017–18 ನಿಂದ 2019–20)		2020–21		2021–22		ಒಟ್ಟು	
	ಐ ಆರ್	ಕಂಡಿಕೆ	ಐ ಆರ್	ಕಂಡಿಕೆ	ಐ ಆರ್	ಕಂಡಿಕೆ	ಐ ಆರ್	ಕಂಡಿಕೆ	ಐ ಆರ್	ಕಂಡಿಕೆ	ಐ ಆರ್	ಕಂಡಿಕೆ
ಜಿಲ್ಲಾ ಪಂಚಾಯಿತಿ	180	631	44	322	28	367	12	174	7	96	271	1,590
ತಾಲ್ಲೂಕು ಪಂಚಾಯಿತಿ	516	1,981	112	957	128	1,639	28	320	24	197	808	5,094
ಗ್ರಾಮ ಪಂಚಾಯಿತಿ	0	0	151	1,352	122	1,553	45	623	71	732	389	4,260
ಒಟ್ಟು	**696**	**2,612**	**307**	**2,631**	**278**	**3,559**	**85**	**1,117**	**102**	**1,025**	**1,468**	**10,944**

ಆಧಾರ: ಪರಿಶೀಲನಾ ವರದಿಗಳು

ಬಾಕಿ ಉಳಿದಿರುವ 1,468 ಐಆರ್ ಗಳಲ್ಲಿ, 2,612 ಕಂಡಿಕೆಗಳನ್ನು (ಶೇಕಡಾ 24) ಹೊಂದಿರುವ, 696 ಐ.ಆರ್ ಗಳು (ಶೇಕಡಾ 47) 10 ವರ್ಷಗಳಿಗಿಂತ ಹೆಚ್ಚು ಕಾಲ ಬಾಕಿ ಉಳಿದಿವೆ, ಇದು ಸಿಇಒ ಕಡೆಯಿಂದ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ ಐ.ಆರ್‌ಗಳು ಮತ್ತು ಕಂಡಿಕೆಗಳ ವಿವರಗಳು **ಅನುಬಂಧ–1.14** ರಲ್ಲಿವೆ.

ಬಾಕಿ ಇರುವ ಲೆಕ್ಕಪರಿಶೋಧನಾ ಆಕ್ಷೇಪಣೆಗಳನ್ನು ತೆರವುಗೊಳಿಸಲು ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಅಡ್ ಹಾಕ್ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ಹೇಳಿತು (ಏಪ್ರಿಲ್ 2024).

1.13 ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಚರ್ಚಿಸಬೇಕಾದ ಕಂಡಿಕೆಗಳು

ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕು ಮತ್ತು ಈ ವರದಿಗಳನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯಂತೆಯೇ ರಾಜ್ಯ ಶಾಸಕಾಂಗದ ಪ್ರತ್ಯೇಕ ಸಮಿತಿಯು ಚರ್ಚಿಸಬೇಕು ಎಂದು ಎರಡನೇ ಆಡಳಿತ ಸುಧಾರಣೆಗಳ ಆಯೋಗವು ಶಿಫಾರಸು ಮಾಡಿತು (ಅಕ್ಟೋಬರ್ 2007).

ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳನ್ನು ಚರ್ಚಿಸಲು ರಾಜ್ಯ ಸರ್ಕಾರವು ಮಾರ್ಚ್ 12, 2010 ರಂದು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯನ್ನು ರಚಿಸಿತು.

ಕಳೆದ ಐದು ವರ್ಷಗಳಲ್ಲಿ ಲೆಕ್ಕಪರಿಶೋಧನಾ ಚರ್ಚೆಯ ವರದಿಗಳು/ವಾರ್ಷಿಕ ತಾಂತ್ರಿಕ ಐಆರ್‌ಗಳಲ್ಲಿ ಪ್ರಕಟವಾದ ಹಣದ ಮೌಲ್ಯವಿರುವ ಕಂಡಿಕೆಗಳ ಸ್ಥಿತಿ ಮತ್ತು ಚರ್ಚೆಗೆ ಬಾಕಿಯಿರುವ ವಿವರಗಳನ್ನು **ಕೋಷ್ಟಕ–1.13**ರಲ್ಲಿ ನೀಡಲಾಗಿದೆ.

ಕೋಷ್ಟಕ–1.13: ಲೆಕ್ಕಪರಿಶೋಧನಾ ವರದಿಗಳಲ್ಲಿ ಕಂಡುಬಂದ ಹಣದ ಮೌಲ್ಯದೊಂದಿಗೆ ಕಂಡಿಕೆಗಳ ವಿವರಗಳನ್ನು ತೋರಿಸುವ ಮತ್ತು ಚರ್ಚೆಗೆ ಬಾಕಿಯಿರುವ ವಿವರಗಳನ್ನು ತೋರಿಸುವ ಪಟ್ಟಿ

ಲೆಕ್ಕಪರಿಶೋಧನಾ ವರದಿ	ಪ್ಯಾರಾಗಳ ಸಂಖ್ಯೆ	ಹಣದ ಮೌಲ್ಯ	ಚರ್ಚೆಯ ಸ್ಥಿತಿ
2019–20	01	1.29	ಬಾಕಿಯಿದೆ
2020–21	01	0.62	ಬಾಕಿಯಿದೆ

ಆಧಾರ: ಸಿಎಜಿ ಲೆಕ್ಕಪರಿಶೋಧನಾ ವರದಿಗಳು ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಭೆಯ ಕಡತಗಳ ಸಮಿತಿ.

ರಾಜ್ಯ ಸರ್ಕಾರವು ತಮ್ಮ ಉತ್ತರದಲ್ಲಿ ಮೇಲಿನ ತೀರ್ಮಾನಗಳನ್ನು ಒಪ್ಪಿಕೊಂಡಿತು (ಏಪ್ರಿಲ್ 2024).

1.14 ನಾಲ್ಕನೇ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನ

ನಾಲ್ಕನೇ ಹಣಕಾಸು ಆಯೋಗವನ್ನು 2015ರ ಡಿಸೆಂಬರ್‌ನಲ್ಲಿ 2018–19 ರಿಂದ 2022–23 ರವರೆಗಿನ ಅವಧಿಗೆ ರಚಿಸಲಾಯಿತು. ಆಯೋಗದ ಪ್ರಮುಖ ಶಿಫಾರಸುಗಳ ಅನುಷ್ಠಾನವು ಈ ಕೆಳಗಿನಂತಿದೆ.

1.14.1 ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ನಡುವೆ ಹಣಕಾಸು ಸಂಪನ್ಮೂಲಗಳ ಹಂಚಿಕೆ

ಎಸ್.ಎಫ್.ಸಿಯ ಶಿಫಾರಸುಗಳಲ್ಲಿ ಒಂದಾದ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ನಡುವಿನ ಹಣಕಾಸಿನ ಸಂಪನ್ಮೂಲಗಳ ನಿಜವಾದ ಹಂಚಿಕೆಗಳು ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ ಆಧಾರದ (ಎನ್.ಎಲ್.ಎನ್.ಒ.ಆರ್.ಆರ್) ಮೇಲೆ 52:48 ಅನುಪಾತದಲ್ಲಿರಬೇಕು, ಇದು ಮೂಲ ವರ್ಷ 2018–19 ಆಗಿದ್ದು ನಂತರ ಪ್ರತಿ ವರ್ಷವೂ ಇರಬೇಕು. ಇದಲ್ಲದೆ, ಎನ್.ಎಲ್.ಎನ್.ಒ ಆರ್.ಆರ್‌ನ ಮೇಲಿನ 48 ಪ್ರತಿಶತದಷ್ಟು ಪಾಲನ್ನು ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಬಿಬಿಎಂಪಿ ಗೆ ಕ್ರಮವಾಗಿ 35, 12 ಮತ್ತು ಒಂದು ಅನುಪಾತದಲ್ಲಿ ಹಂಚಿಕೆ ಮಾಡಬೇಕು. ಶಿಫಾರಸುಗಳ ಪ್ರಕಾರ, ಎನ್.ಎಲ್.ಎಲ್.ಒ.ಆರ್.ಆರ್ ನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಂಚಿಕೆ ಮಾಡಬೇಕಾದ ಪಾಲಿನ 7.76 ಪ್ರತಿಶತನ್ನು ಗ್ರಾಮ ಪಂಚಾಯಿತಿಗಳಿಗೆ ಮೀಸಲಿಡಬೇಕಾಗಿತ್ತು.

ಎನ್.ಎಲ್.ಎನ್.ಓ.ಆರ್.ಆರ್ ನಲ್ಲಿ ಸ್ಥಳೀಯ ಸಂಸ್ಥೆಗಳ ಪಾಲು ಇಳಿಕೆಯ ಪ್ರವೃತ್ತಿಯನ್ನು (2018–19ರಲ್ಲಿದ್ದ ಶೇಕಡಾ 33.43 ರಿಂದ 2021–22ರ ಅವಧಿಗೆ 30.93 ಶೇಕಡಾ) ತೋರಿಸುತ್ತಿದ್ದುದ್ದನ್ನು, ಲೆಕ್ಕಪರಿಶೋಧನೆಯು ಗಮನಿಸಿತು. ಇದು ನಾಲ್ಕನೇ ಎಸ್.ಎಫ್.ಸಿಯ ಶಿಫಾರಸಿನ ಶೇಕಡಾ 48ಕ್ಕಿಂತ ಕಡಿಮೆಯಿದೆ, ವಿವರಗಳನ್ನು **ಕೋಷ್ಟಕ–1.14**ರಲ್ಲಿ ನೀಡಲಾಗಿದೆ.

ಕೋಷ್ಟಕ–1.14: ಎಸ್.ಎಲ್..ಎಸ್.ಒ.ಆರ್.ಆರ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಸಾಪೇಕ್ಷ ಪಾಲು

(₹ ಕೋಟಿಗಳಲ್ಲಿ)

ವಿವರಗಳು	2018–19	2019–20	2020–21	2021–22
ಎಸ್.ಎಲ್.ಎಸ್.ಒ.ಆರ್.ಆರ್*	1,14,357.00	1,24,540.90	1,18,735.26	1,41,492.43
ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಸ್ತಾಂತರಗಳು #	33,845.99	35,545.48	34,889.18	38,179.59
ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ #	4,383.25	4,762.94	4,271.55	5,586.32
ಒಟ್ಟು ಹಂಚಿಕೆಗಳು	38,229.24	40,308.42	39,160.73	43,765.91
ಎಸ್.ಎಲ್.ಎಸ್.ಒ.ಆರ್.ಆರ್ ನಲ್ಲಿ ಸ್ಥಳೀಯ ಸಂಸ್ಥೆಗಳ ಪಾಲು (ಶೇಕಡಾವಾರು)	33.43	32.36	32.98	30.93

ಆಧಾರ: * ಎಸ್.ಎಲ್.ಎಸ್.ಓ.ಆರ್.ಆರ್. ಅನ್ನು ಲೆಕ್ಕ ಹಾಕಲು ಸೆಸ್ ಮತ್ತು ಸಂಗ್ರಹ ಶುಲ್ಕಗಳನ್ನು ಪರಿಗಣಿಸಲಾಗಿಲ್ಲ. ಇದಲ್ಲದೆ, 2020–21 ಮತ್ತು 2021–22 ಸಮಯದಲ್ಲಿ ಬ್ಯಾಕ್–ಟು–ಬ್ಯಾಕ್ ಸಾಲಗಳಾಗಿ ಸ್ವೀಕರಿಸಿದ ಪರಿಹಾರವನ್ನು ಪರಿಗಣಿಸಲಾಗಿಲ್ಲ.
XIII, XIV ಮತ್ತು XV ಹಣಕಾಸು ಆಯೋಗದಿಂದ ವಿತರಿಸಲ್ಪಟ್ಟ ಹಂಚಿಕೆಗಳನ್ನು ಸೇರಿಸಲಾಗಿಲ್ಲ.

ರಾಜ್ಯ ಸರ್ಕಾರವು ಮೇಲಿನ ತೀರ್ಮಾನಗಳನ್ನು (ಏಪ್ರಿಲ್ 2024) ಅಂಗೀಕರಿಸಿತು.

1.14.2 ದತ್ತಸಂಚಯ ನಿರ್ವಹಣೆಗೆ ಸಂಬಂಧಿಸಿದ ಶಿಫಾರಸುಗಳನ್ನು ಅನುಷ್ಠಾನಗೊಳಿಸದಿರುವುದು

ನಾಲ್ಕನೇ ಎಸ್.ಎಫ್.ಸಿಯಯು ತನ್ನ ವರದಿಯ ಮೂಲಕ ಆರ್.ಡಿ.ಪಿ.ಆರ್.ನಲ್ಲಿನ ದತ್ತಾಂಶದ ಕೊರತೆಯನ್ನು ಗಮನಿಸಿ, ಸಮಸ್ಯೆಗಳನ್ನು ಪರಿಹರಿಸಲು ಶಿಫಾರಸುಗಳನ್ನು ಮಾಡಿತು (ಡಿಸೆಂಬರ್ 2018) ಈ ಶಿಫಾರಸುಗಳನ್ನು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು (ಫೆಬ್ರವರಿ 2023). ಶಿಫಾರಸುಗಳು ಮತ್ತು ಅದರ ಅನುಷ್ಠಾನದ ಸ್ಥಿತಿಯನ್ನು **ಕೋಷ್ಟಕ–1.15**ರಲ್ಲಿ ನೀಡಲಾಗಿದೆ.

ಕೋಷ್ಟಕ–1.15: ದತ್ತಾಂಶ ನಿರ್ವಹಣೆಗೆ ಸಂಬಂಧಿಸಿದ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳ ಸ್ಥಿತಿ

ಕಂಡಿಕೆ	ರಾಜ್ಯ ಹಣಕಾಸು ಆಯೋಗದ ಶಿಫಾರಸು	ಸ್ಥಿತಿಗತಿ.
12.1.8(ಎ)	ಸರಿಯಾದ ದತ್ತಸಂಚಯವನ್ನು ಖಚಿತಪಡಿಸಿಕೊಳ್ಳಲು 13ನೇ ಎಫ್.ಸಿ ಯ ಸಲಹೆಗಳು ಮತ್ತು ಸ್ವರೂಪಗಳನ್ನು ಅಳವಡಿಸಿಕೊಳ್ಳುವುದು.	ಅನುಷ್ಠಾನಗೊಂಡಿಲ್ಲ
12.1.8(ಬಿ)	ಪ್ರತಿ ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿಕೇಂದ್ರೀಕರಣ ವಿಶ್ಲೇಷಣೆ ಕೋಶಕ್ಕೆ (ಡಿಎಸಿ) ದತ್ತಾಂಶವನ್ನು ನಿರ್ವಹಿಸಲು ಮತ್ತು ನವೀಕರಿಸಲು ನೋಡಲ್ ಏಜೆನ್ಸಿಯಾಗಿ ಅಧಿಕಾರ ನೀಡಬೇಕು.	ಅನುಷ್ಠಾನಗೊಳಿಸಲಾಯಿತು. ಆದಾಗ್ಯೂ, ಡಿಎಸಿ ಮೀಸಲಾದ ಮತ್ತು ವಿಶ್ವಾಸಾರ್ಹ ದತ್ತಸಂಚಯವನ್ನು ಹೊಂದಿಲ್ಲ.
12.1.8(ಸಿ)	ಸ್ಥಳೀಯ ಸಂಸ್ಥೆಗಳಿಗೆ ಸಾಮರ್ಥ್ಯ ವೃದ್ಧಿ, ದತ್ತಾಂಶ ಆಧಾರ ಮತ್ತು ಲೆಕ್ಕಪತ್ರಗಳ ನಿರ್ವಹಣೆಗೆ ಹಣಕಾಸಿನ ಬೆಂಬಲದ ಅಗತ್ಯ ಮುಂದುವರಿಯುತ್ತದೆ.	ಅನುಷ್ಠಾನಗೊಂಡಿಲ್ಲ
12.1.8(ಡಿ)	ಸ್ಥಳೀಯ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳು ಮತ್ತು ಯೋಜನೆಗಳ (ಐತಿಹಾಸಿಕ ಮತ್ತು ಪರಂಪರೆಯ ದತ್ತಾಂಶ ಸೇರಿದಂತೆ) ಎಲ್ಲಾ ದತ್ತಾಂಶಗಳನ್ನು ಡಿಜಿಟಲೀಕರಣಗೊಳಿಸಬೇಕು ಮತ್ತು ಸಾರ್ವಜನಿಕ ವಲಯದಲ್ಲಿ ಲಭ್ಯವಾಗುವಂತೆ ಮಾಡಬೇಕು.	ಅನುಷ್ಠಾನಗೊಂಡಿಲ್ಲ
12.1.8(ಇ)	ಪರಿಣಾಮಕಾರಿ ಆಡಳಿತಕ್ಕೆ ನೈಜ ಸಮಯದ ಆಧಾರದ ಮೇಲೆ ಕಾರ್ಯಕ್ಷಮತೆ ಮತ್ತು ಕಾರ್ಯಾಚರಣೆಗಳ ಬಗ್ಗೆ ಮಾಹಿತಿ ಮತ್ತು ದತ್ತಾಂಶ ಲಭ್ಯತೆಯು ನಿರ್ಣಾಯಕವಾಗಿದೆ.	ಪಿ.ಆರ್.ಐಗಳ ಕಾರ್ಯಕ್ಷಮತೆ ಮತ್ತು ಕಾರ್ಯಾಚರಣೆಗಳ ನೈಜ ಸಮಯದ ದತ್ತಾಂಶ ಲಭ್ಯವಿಲ್ಲ.

ಆಧಾರ: ನಾಲ್ಕನೇ ಎಸ್.ಎಫ್.ಸಿ. ವರದಿ.

ನಿರ್ಣಯ

2021–22ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳು ಲಭ್ಯವಿರುವ ನಿಧಿಗೆ ಎದುರಾಗಿ ಮಾಡಿದ ವೆಚ್ಚವು ಕ್ರಮವಾಗಿ ಶೇಕಡಾ 82, 72 ಮತ್ತು 73 ಆಗಿದ್ದು, ಇದು ನಿಧಿಯ ಕಡಿಮೆ ಬಳಕೆಯನ್ನು ಸೂಚಿಸುತ್ತದೆ. ಉಪ ನೋಂದಣಾಧಿಕಾರಿಗಳ ಕಚೇರಿಗಳೊಂದಿಗೆ ಸ್ವೀಕೃತಿಗಳನ್ನು ಸಮನ್ವಯಗೊಳಿಸದ ಕಾರಣ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು 2019–2022ರ ಅವಧಿಗೆ ತಾಲ್ಲೂಕು ಪಂಚಾಯಿತಿಗಳಿಗೆ ಎ.ಎಸ್.ಡಿ ಯನ್ನು ವರ್ಗಾಯಿಸಲು ಸಾಧ್ಯವಾಗಲಿಲ್ಲ. ಜಿಲ್ಲಾ ಪಂಚಾಯತ್‌ಗಳು ಮತ್ತು ಗ್ರಾಮ ಪಂಚಾಯಿತಿಗಳು ₹29.35 ಕೋಟಿಗಳಷ್ಟು ಖರ್ಚು ಮಾಡದ ಹಿಂದಿನ ಹಣಕಾಸು ಆಯೋಗದ ಅನುದಾನವನ್ನು ಸರ್ಕಾರಿ ಖಾತೆಗೆ ರವಾನಿಸಲಿಲ್ಲ. ಮಾರ್ಚ್ 2022ರ ಅಂತ್ಯದ ವೇಳೆಗೆ, 1,590 ಕಂಡಿಕೆಗಳನ್ನು ಒಳಗೊಂಡಿರುವ 271 ತಪಾಸಣಾ ವರದಿಗಳು, 5,094 ಕಂಡಿಕೆಗಳನ್ನು ಒಳಗೊಂಡಿರುವ 808 ತಪಾಸಣಾ ವರದಿಗಳು ಮತ್ತು 4,260 ಕಂಡಿಕೆಗಳನ್ನು ಒಳಗೊಂಡಿರುವ 389 ತಪಾಸಣಾ ವರದಿಗಳು ಕ್ರಮವಾಗಿ ವಿವಿಧ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಬಾಕಿ ಉಳಿದಿವೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಒಂಬುಡ್ಸ್‌ಮನ್ ₹ 11.81 ಕೋಟಿ ವಸೂಲಿಗೆ ಆದೇಶಿಸಿದ್ದರು, ಅದರಲ್ಲಿ ₹ 3.51 ಕೋಟಿ ಮಾತ್ರ ವಸೂಲಾಗಿದೆ. ಹಣಕಾಸು ಆಯೋಗದ ಶಿಫಾರಸ್ಸುಗಳ ಪ್ರಕಾರ ರಾಜ್ಯವು, ಎನ್.ಎಲ್..ಎನ್.ಒ.ಆರ್.ಆರ್ ಗಳ ಅಗತ್ಯ ಪಾಲನ್ನು ಹಂಚಿಕೆ ಮಾಡಲಿಲ್ಲ.